# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:03 • ಸಂಚಿಕೆ: 06 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 27.06.2025 • ಶುಕ್ರವಾರ • ಪುಟ:04 • ಬೆಲೆ:2
Volume:03 • Issue: 06 • PRGI No:KARKAN/2023/88055 • VIJAYANAGARA • 27.06.2025 • Friday • Page:04 • Rs:2



Grow with Us, Advertise in Hampi Times
Print & Digital Media
“Looking to bring your sales and services to readers Fingertips? HAMPI TIMES is the ideal platform”

Call:9448633038/email:hampitimes@gmail.com


# ವ್ಯಸನಮುಕ್ತ ಸಮಾಜ ಮಕ್ಕಳಿಂದ ಮಾತ್ರ ಸಾಧ್ಯ ಮಕ್ಕಳೇ ಕೈಮುಗಿದು ಹೆತ್ತವರ ದುಶ್ಚಟ ಬಿಡಿಸಬೇಕು

## ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅಭಿಮತ | ಅಂತರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ

## ಮಕ್ಕಳು ತಂದೆ ತಾಯಿಯರ ಆಸ್ತಿ ಪಾಲುದಾರರಾಗುವ ಬದಲಾಗಿ ಅವರ ಆದರ್ಶಗಳಿಗೆ ಪಾಲುದಾರರಾಗಬೇಕಿದೆ

■ ಹಂಪಿ ಟೈಮ್ಸ್ ಹೊಸಪೇಟೆ

ಸ್ವಸ್ಥ, ಸುಂದರ ಸಮಾಜ ನಿರ್ಮಾಣಕ್ಕಾಗಿ ವ್ಯಸನ ಮುಕ್ತ ಸಮಾಜದ ಕನಸನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಬೇಕಾದ ಅನಿವಾರ್ಯತೆ ಇದೆ ಎಂದು ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಮತ್ತು ನಗರಸಭೆ ಸಹಯೋಗದಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆಯನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು. ದುಶ್ಚಟಗಳಿಗೆ ದಾಸರಾಗುವ ಮುನ್ನ ಕೌಟುಂಬಿಕ ಜವಾಬ್ದಾರಿಗಳನ್ನು ಅರಿತು ಮಾದಕ ವಸ್ತುಗಳಿಂದ ದೂರವಿರುವ ಸಂಕಲ್ಪ ಮಾಡಬೇಕಿದೆ. ಹಾಗಾದಾಗ ಮಾತ್ರವೇ ವ್ಯಸನ ಮುಕ್ತ ಸಮಾಜ ನಿರ್ಮಾಣದ ಕನಸು ನನಸಾಗಬಹುದು. ಮಕ್ಕಳು ನಿಮ್ಮ ಕುಟುಂಬದಲ್ಲಿನ ವ್ಯಸನಿಗಳಿಗೆ ಅವರನ್ನು ಕೈ ಮುಗಿದು ದುಶ್ಚಟಗಳನ್ನು ಬಿಡುವಂತೆ ಮನವೊಲಿಕೆಗೆ ಪ್ರಯತ್ನಿಸಬೇಕು. ದೇವರಷ್ಟೇ ಪವಿತ್ರವಾದ ಮಕ್ಕಳ ಮಾತು, ಮಕ್ಕಳ ಭಾವನಾತ್ಮಕತೆಗೆ ದುಶ್ಚಟಗಳನ್ನು ಬಿಟ್ಟಿರುವ ಉದಾಹರಣೆಗಳಿವೆ. ಮುಂದಿನ ಭವಿಷ್ಯಕ್ಕೆ ವ್ಯಸನ ಮುಕ್ತ ಸಮಾಜ ನಿರ್ಮಾಣದ ಭರವಸೆಯನ್ನು ಇಂದಿನ ಮಕ್ಕಳಿಂದ ಮಾತ್ರ ಸಾಕಾರ ಸಾಧ್ಯವಾಗಲಿದೆ. ಮಕ್ಕಳು ತಂದೆ ತಾಯಿಯರ ಆಸ್ತಿ ಪಾಲುದಾರರಾಗುವ ಬದಲಾಗಿ ಅವರ ಆದರ್ಶಗಳಿಗೆ ಪಾಲುದಾರರಾಗಬೇಕಿದೆ. ಗುಟ್ಕಾ, ತಂಬಾಕು, ಇಸ್ಪೀಟ್ ಸೇರಿದಂತೆ ಯಥೇಚ್ಛಾ



ಮೊಬೈಲ್ ಬಳಕೆಯು ಡ್ರಗ್ಸ್‌ಗೆ ಸಮಾನವಾಗಿದೆ. ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಕೇವಲ ಸರ್ಕಾರವಷ್ಟೇ ಅಲ್ಲ, ಸಂಘ, ಸಂಸ್ಥೆಗಳು ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು. ಬಿ.ಎಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಯುವಕರಲ್ಲಿ ಮಾದಕ ವಸ್ತುಗಳ ಮೇಲಿನ ಸೆಳೆತ ಹೆಚ್ಚು. ಹಾಗಾಗೀ ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಕಾರ್ಯಕ್ರಮ ಆಯೋಜಿಸಲಾಗಿದೆ. ಮಾದಕ ವಸ್ತುಗಳ ಬಳಕೆಯಿಂದಾಗಿ ಮಾನಸಿಕ ಮತ್ತು ದೈಹಿಕವಾಗಿ ದುಷ್ಪಾರಿಣಾಮಗಳು ಹೆಚ್ಚಾಗಲಿವೆ. ಈ ಕಾರ್ಯಕ್ರಮದಿಂದಾಗಿ ಮಕ್ಕಳಲ್ಲಿ ಪರಿವರ್ತನೆ ಮೂಡಿಸುವ ಉದ್ದೇಶ ನಮ್ಮದಾಗಿದೆ. ಅಕ್ರಮವಾಗಿ ಮದ್ಯ ಮಾರಾಟ ಹಾಗೂ ಮಾದಕ ವಸ್ತುಗಳ ಮಾರಾಟ ಮಾಡುವುದು, ಯಾವುದೇ ವ್ಯಕ್ತಿ ಸಾರ್ವಜನಿಕವಾಗಿ ಮದ್ಯ, ಮಾದಕ ವಸ್ತುಗಳ ಸೇವನೆ ಮಾಡುವುದು ಕಂಡು ಬಂದಲ್ಲಿ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಕರೆ ಮಾಡಿ ತಿಳಿಸಬಹುದು ಎಂದರು.

ಇದೇ ವೇಳೆ ರಂಗಲೋಕ ಕಲಾ ಸಂಸ್ಥೆಯ ಕಲಾವಿದರು ನಾಟಕದ ಮೂಲಕ ಹಾಗೂ ಕಲಾವಿದ ಜೋಗಿ ತಾಯಪ್ಪ ಅವರು ಕಿರು ಚಿತ್ರ ಪ್ರದರ್ಶನದ ಮೂಲಕ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಯಿತು. ವೇದಿಕೆಯಲ್ಲಿ ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ನಾಗರಾಜ ಹವಾಲ್ದಾರ್, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ಡ್ರಗ್ಸ್ ನಿಯಂತ್ರಣಾಧಿಕಾರಿ ಜಿ.ವಿ.ನಾರಾಯಣ ರೆಡ್ಡಿ, ಪ್ರಕಾಶ ಶಾನುಬಾಗ್, ಡಿವೈಎಸ್ಪಿ ಮಂಜುನಾಥ ಸೇರಿದಂತೆ ಸಾವಿರಕ್ಕೂ ಹೆಚ್ಚು ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

### ಒಳ್ಳೆಯ ಮಾಹಿತಿಗಷ್ಟೇ ಮೊಬೈಲ್ ಬಳಸಿ

ಇಂದಿನ ಮಕ್ಕಳಲ್ಲಿ ವಿಶ್ವದ ಭವಿಷ್ಯವಿದೆ. ಬದುಕಿನ ಪಯಣದಲ್ಲಿ ಒಳ್ಳೆಯದು, ಕೆಟ್ಟದ್ದು ಎರಡು ಇರುತ್ತೇ ಆದರೆ ವಿವೇಚನೆಯಿಂದ ಸರಿಯಾದ ಆಯ್ಕೆ ಮಾಡಿಕೊಳ್ಳುತ್ತೇವೆ. ಅದರಂತೆ ಮಾದಕ ವಸ್ತುಗಳ ಬಳಕೆಯು ಅಷ್ಟೇ. ಪ್ರತಿ ಮಾದಕ ವಸ್ತುಗಳ ಪ್ಯಾಕೇಟ್‌ನಲ್ಲಿ ಆರೋಗ್ಯಕ್ಕೆ ಹಾನಿ ಕಾರಕ ಎಂದು ಮುದ್ರಿಸಿದರೂ ಬಳಸುವರ ಸಂಖ್ಯೆ ಕಡಿಮೆಯಾಗಿಲ್ಲ.



ವಿದ್ಯಾರ್ಥಿಗಳು ನಿಮ್ಮ ಇಷ್ಟದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಗುರಿ ತಲುಪಲು ಶ್ರಮಿಸ ಬೇಕು. ಮುಂದಿನ ಸಧೃಡ ಭವಿಷ್ಯಕ್ಕಾಗಿ ಮಾದಕ ವಸ್ತುಗಳಿಂದ ದೂರವಿರಿ. ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ವಾಟ್ಸಾಪ್ ನಂತಹ ಅಂತರ್ಜಾಲಗಳನ್ನು ಬಳಕೆ ಮಾಡುವಾಗ ಎಚ್ಚರವಿರಲಿ. ಒಳ್ಳೆಯ ಮಾಹಿತಿ ಪಡೆಯಲು ಅಷ್ಟೇ ಮೊಬೈಲ್ ಬಳಸಿ.

– ಅಜಯ್‌ರಾವ್, ಖ್ಯಾತ ಚಿತ್ರನಟ

## ಮೈಕ್ರೋ ನ್ಯೂಸ್

### ಜೂ.27 ಸರ್ಕಾರದ ಯೋಜನೆಗಳು, ಸಾಧನೆಯ ವಸ್ತು ಪ್ರದರ್ಶನ

ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಜೂ.27 ರಿಂದ 30 ರವರೆಗೆ ಸರ್ಕಾರದ ಯೋಜನೆಗಳು ಮತ್ತು ಸಾಧನೆಗಳನ್ನು ಬಿಂಬಿಸುವ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಧನಂಜಯಪ್ಪ.ಬಿ. ತಿಳಿಸಿದ್ದಾರೆ.



ಶಾಸಕ ಹೆಚ್.ಆರ್.ಗವಿಯಪ್ಪ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಆಗಮಿಸಲಿದ್ದಾರೆ. ವಸ್ತು ಪ್ರದರ್ಶನದಲ್ಲಿ 4 ಸೆಲ್ಫಿ ಪಾಯಿಂಟ್‌ಗಳು, ನಾಮಫಲಕಗಳು, ರೋಟ್ಯಾಟಿಂಗ್ ಯೂನಿಟ್ ಸೇರಿ ಸ್ವಾಗತ ಕಮಾನುಗಳನ್ನು ನಿರ್ಮಿಸಲಾಗಿರುತ್ತದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಿದ್ದಾರೆ.






# ಜೆಜೆಎಂ ಕಳಪೆ ಕಾಮಗಾರಿಗೆ ತರಾಟೆ

## ನಾಗೇನಹಳ್ಳಿ ಗ್ರಾಪಂ ಅಧ್ಯಕ್ಷ ಎಂ.ದುರುಗಪ್ಪ ಗರಂ | ಶಿಕ್ಷಣಕ್ಕೆ ಆದ್ಯತೆ

## ಗ್ರಾಮೀಣ ಮಟ್ಟದಲ್ಲಿ ನಿರಂತರ ಕೆಡಿಪಿ ಸಭೆ ಮಾಡಿದ ಹೆಗ್ಗಳಿಕೆಗೆ ಪಾತ್ರ



■ ಹಂಪಿ ಟೈಮ್ಸ್ ಹೊಸಪೇಟೆ

ತಾಲೂಕಿನ ನಾಗೇನಹಳ್ಳಿ ಗ್ರಾಮ ಪಂಚಾಯತಿಯ ಗ್ರಾಮೀಣ ಮಟ್ಟದ ಕೆಡಿಪಿ (ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು) ಸಭೆ ಮತ್ತು ಪ್ರಗತಿ ಪರಿಶೀಲನಾ ಸಭೆಗಳನ್ನು ನಿರಂತರವಾಗಿ ನಡೆಸಲಾಗುತ್ತಿದ್ದು, ಕೆಡಿಪಿ ಸಭೆಯಿಂದ ಗ್ರಾಮೀಣ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ವೇಗ ದೊರೆತಿದೆ. ಐದು ಆಕ್ಷನ್ ಪ್ಲಾನ್ ಕಾಮಗಾರಿಗಳನ್ನು ಮಾಡಿದ ಹೆಗ್ಗಳಿಕೆ ನಾಗೇನಹಳ್ಳಿ ಗ್ರಾಪಂಗೆ ಸಲ್ಲುತ್ತದೆ ಎಂದು ಗ್ರಾಪಂ ಅಧ್ಯಕ್ಷ ಎಂ.ದುರುಗಪ್ಪ ಹೇಳಿದರು.

ತಾಲೂಕಿನ ನಾಗೇನಹಳ್ಳಿಯಲ್ಲಿ ಗುರುವಾರ ಗ್ರಾಮೀಣ ಮಟ್ಟದ ಕೆಡಿಪಿ ಮತ್ತು ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಗ್ರಾಮೀಣ ಮಟ್ಟದಲ್ಲಿ ಕೆಡಿಸಿ ಸಭೆ ಆಯೋಜಿಸುವುದರಿಂದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಾಗಿ ಇಲಾಖೆಯ ಸೌಲಭ್ಯಗಳ ಕುರಿತು ಸಮಗ್ರ ಮಾಹಿತಿ ನೀಡುತ್ತಿದ್ದಾರೆ. ಅಲ್ಲದೆ ಗ್ರಾಮೀಣ ಮಟ್ಟದ ಸಮಸ್ಯೆಗಳನ್ನು ಇಲಾಖೆಯ ಅಧಿಕಾರಿಗಳ ಗಮನಕ್ಕೆ ನೇರವಾಗಿ ತರಲು ಸಹಕಾರಿಯಾಗಿದೆ. ಸರ್ಕಾರ ಆದೇಶಗಳು ದಿನ ದಿನಕ್ಕೂ ಬದಲಾಗುತ್ತಿರುವುದರಿಂದ ಅಭಿವೃದ್ಧಿ ಕೆಲಸಗಳಿಗೂ ಅನುದಾನದ ಕೊರತೆಯಾಗಿ ಕೆಲ ಅಭಿವೃದ್ಧಿಗೆ ಹಿನ್ನಡೆಯಾಗುತ್ತಲಿದೆ. ಸರ್ಕಾರದ ಆದೇಶದನ್ವಯ ಗುತ್ತಿಗೆದಾರರಿಗೆ ಕಾಮಗಾರಿಯನ್ನು ನೀಡಲಾಗಿರುತ್ತದೆ. ಕಾಮಗಾರಿ ಆರಂಭಗೊಂಡ ನಂತರ ಅನುದಾನ ತಗ್ಗಿಸಿದರೆ ಗುತ್ತಿಗೆದಾರರಿಗೆ ಯಾವ ರೀತಿಯಲ್ಲಿ ಹಣ ಸಂದಾಯ ಮಾಡಬೇಕು ಎಂಬುದೇ ಯಕ್ಷಪ್ರಶ್ನೆಯಾಗಿದೆ ಎಂದರು.

ಸರ್ಕಾರಿ ಶಾಲೆಗಳಿಗೆ ತಡೆಗೋಡೆ, ಶಾಲೆ ಹೆಸರಿಗೆ ಶಾಲೆಯ ಆಸ್ತಿಯನ್ನು ನೋಂದಣಿ ಮಾಡಿಕೊಡುವುದು ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಗ್ರಾಪಂ ವ್ಯಾಪ್ತಿಯ ಸರ್ಕಾರಿ ಶಾಲೆಯ ಮುಖ್ಯಗುರುಗಳು ಮನವಿ ಸಲ್ಲಿಸಿದರು. ಅಧ್ಯಕ್ಷರು ಪ್ರತಿಕ್ರಿಯಿಸಿ, ಶೌಚಾಲಯಗಳಿಗೆ, ಕುಡಿಯುವ ನೀರಿಗೆ ಮೊದಲ ಆದ್ಯತೆ ನೀಡಲಾಗಿದೆ. ತಡೆ ಗೋಡೆ ನಿರ್ಮಾಣ ತಡವಾಗಿದ್ದು, ಆದ್ಯತೆಯ ಮೇರೆಗೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಈಗಾಗಲೇ ಸರ್ವೇ ಕಾರ್ಯ ಆರಂಭಗೊಂಡಿದ್ದು ಶಾಲೆಗಳಿರುವ ಶಾಲಾ ಆಸ್ತಿಯನ್ನು ಶಾಲೆಯ ಹೆಸರಿಗೆ ಮಾಡಿಕೊಡಲು ಕಂದಾಯ ಅಧಿಕಾರಿಗಳಿಗೆ ಗ್ರಾಪಂ ಅಧ್ಯಕ್ಷರು ಸೂಚಿಸಿದರು.

ಅರಣ್ಯ ಇಲಾಖೆಯ ಸಹಕಾರದಿಂದ ಗ್ರಾಪಂ ವ್ಯಾಪ್ತಿಯಲ್ಲಿ 4500 ಗಿಡ ನೆಡು ತೋಪು ಹಮ್ಮಿಕೊಳ್ಳಲಾಗಿದ್ದು, ರಸ್ತೆ ಅಕ್ಕಪಕ್ಕ, ಸ್ಮಶಾನದಲ್ಲೂ ಗಿಡಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಶಾಲೆಯ 11 ವಿದ್ಯಾರ್ಥಿಗಳು ತಾಲೂಕಿನ >>4

### ಜ್ಞಾನ ದೇಗುಲಕ್ಕೆ ಕಿಡಿಗೇಡಿಗಳಿಂದ ಕಲ್ಲೇಟು

ಶಾಲೆ ಪ್ರವೇಶದ್ವಾರದಲ್ಲಿ ಕೆಲ ಕಿಡಿಗೇಡಿಗಳು ಮದ್ಯದ ಬಾಟಲಿಗಳನ್ನು ಒಡೆದು ಬೀಸಾಡುತ್ತಿದ್ದಾರೆ. ಹೇಳಲಾರದಷ್ಟು ಗಲೀಜು ಮಾಡುತ್ತಿದ್ದಾರೆ. ಗ್ರಾಮದ ಮುಖಂಡರು ಕಂಡು ಕಾಣದಂತೆ ಇರದೆ ಕಿಡಿಗೇಡಿಗಳಿಗೆ ಬುದ್ದಿಹೇಳಬೇಕು. ಸರ್ಕಾರಿ ಶಾಲೆಗಳು ಬದುಕಿಗೆ ಅನ್ನ ಕೊಡುವ ದೇಗಲು ಎಂಬುದನ್ನು ಮರೆಯಬಾರದು. ಶಾಲೆ ಪ್ರವೇಶವು ಮಕ್ಕಳು ಶಿಕ್ಷಕರಲ್ಲಿ ಉಲ್ಲಾಸ ತರದೆ, ನರಕಯಾತನೆಯಂತಿರುತ್ತದೆ. ಸಂಬಂಧಿಸಿದ ಗ್ರಾಪಂ ಸದಸ್ಯರು, ಗ್ರಾಮದ ಮುಖಂಡರು ಶಾಲೆಯ ರಕ್ಷಣೆಗೆ ಮುಂದಾಗಬೇಕು ಎಂದು ಪ್ರಾಥಮಿಕ ಶಾಲೆಗಳ ಮುಖ್ಯಶಿಕ್ಷಕರು ಅಳಲು ತೋಡಿಕೊಂಡರು.

### ಸಂಜೆ ಸಾಮೂಹಿಕ ಓದಿಗೆ ಗ್ರಾಪಂ ಸಹಕಾರ

ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಗತಿಗಾಗಿ ವಿಜಯನಗರ ಜಿಲ್ಲೆಯಲ್ಲಿ ಶಾಲೆಗೊಂದು 625 ಗುರಿ ಹೊಂದಲಾಗಿದ್ದು, ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳನ್ನು ಮೊಬೈಲ್‌ನಿಂದ ಪುಸ್ತಕದ ಓದಿನತ್ತ ತರಲು ಗ್ರಾಮಗಳಲ್ಲಿ **‘ಈ ಬಾರಿ ಫಲಿತಾಂಶ ನಮ್ಮದೆ ನಮ್ಮೂರ ವಿದ್ಯಾರ್ಥಿ ನಮ್ಮ ಹೆಮ್ಮೆ’** ಅಭಿಯಾನದಡಿ ‘ಸಂಜೆ ಸಾಮೂಹಿಕ ಓದು’ ಆರಂಭಿಸಬೇಕು ಎಂದು ಹಂಪಿ ಟೈಮ್ಸ್ ಸಂಪಾದಕ ಬಸಾಪುರ ಬಸವರಾಜ ಕೋರಿಕೆಗೆ ಪ್ರತಿಕ್ರಿಯಿಸಿದ ಗ್ರಾಪಂ ಅಧ್ಯಕ್ಷರು, ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಲಾಗುವುದೆಂದು ಪುನರುಚ್ಚರಿಸಿ, ಸಂಜೆ ಸಾಮೂಹಿಕ ಓದು ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಇದೇ ಸಂದರ್ಭದಲ್ಲಿ ತಿಳಿಸಿದರು.






## ಬೆಳಕಿನ ಹಾದಿ

# ಮಾದಕ ವಸ್ತುಗಳ ದುಷ್ಪರಿಣಾಮದ ಸ್ವಯಂ ಅರಿವು ಅಗತ್ಯ

ಮಾದಕ ವಸ್ತುಗಳ ಬಳಕೆ ಹಾಗೂ ಅಕ್ರಮ ಸಾಗಣಿಕೆಯಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಸಲುವಾಗಿ, ವಿಶ್ವಸಂಸ್ಥೆಯು 1987 ಡಿಸೆಂಬರ್ 7ರಂದು ಸಾಮಾನ್ಯ ಸಭೆಯಲ್ಲಿ, ಜೂನ್ 26ನ್ನು



ಅಂತರಾಷ್ಟ್ರೀಯ ಮಾದಕ ವಸ್ತುಗಳ ದುರುಪಯೋಗ ಮತ್ತು ಕಾನೂನುಬಾಹಿರ ಸಾಗಣೆ ವಿರೋಧಿ ದಿನ ಎಂದು ಘೋಷಿಸಿತು.

ಇತ್ತೀಚಿನ ದಿನಗಳಲ್ಲಿ ಯುವ ಜನತೆಯ ಜೀವನಶೈಲಿ ಬದಲಾಗುತ್ತಿದೆ. ಮೋಜು, ಮಸ್ತಿ, ತಡರಾತ್ರಿ ಪಾರ್ಟಿ,ಡ್ರಗ್ಸ್ ಸೇವನೆ ಮುಂತಾದ ಮಾದಕ ವಸ್ತುಗಳಿಗೆ ದಾಸರಾಗುತ್ತಿದ್ದಾರೆ. ಇದರಿಂದಾಗಿ ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯವು ಹಾಳಾಗುತ್ತಿದೆ. ಕೆಲವು ಬಾರಿ ಜೀವವನ್ನೇ ಕಳೆದುಕೊಳ್ಳುವ ಪರಿಸ್ಥಿತಿಯು ಎದುರಾಗುತ್ತಿದೆ. ಅಲ್ಲದೆ ಈ ದುಶ್ಚಟಗಳ ದಾಸರಾಗಿರುವವರು ಆರ್ಥಿಕವಾಗಿಯೂ ದಿವಾಳಿಯಾಗುತ್ತಾರೆ. ಇದು ಸಮಾಜದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ.

ವಿಶ್ವದಾದ್ಯಂತ ಈ ದುಶ್ಚಟಗಳಿಗೆ ಮಕ್ಕಳು ಹಾಗೂ ಯುವಕರೇ ಹೆಚ್ಚಾಗಿ ಬಲಿಯಾಗುತ್ತಿದ್ದಾರೆ. ಮಾದಕ ವಸ್ತುಗಳ ಸೇವನೆ ಮತ್ತು ಅದರ ಸಾಗಣಿಕೆ ಕಾನೂನು ಬಾಹಿರವೆಂದು ತಿಳಿದಿದ್ದರೂ ಕೂಡ ಇದರ ದಂಧೆ ಗಳು ಎಲ್ಲೆಡೆ ನಡೆಯುತ್ತಿದೆ. ಪ್ರತಿಯೊಬ್ಬ ನಾಗರಿಕನು ಮಾದಕ ವಸ್ತುಗಳ ಸೇವನೆ ಮತ್ತು ಅದರಿಂದಾಗುವ ಪರಿಣಾಮದ ಬಗ್ಗೆ ಜಾಗೃತಿ ಹೊಂದಿ, ವಿಶ್ವವನ್ನು ಮಾದಕ ವಸ್ತುಗಳಿಂದ ಮುಕ್ತವಾಗಿರುವ ಪಣವನ್ನು ತೊಡಬೇಕಾಗಿದೆ. ಮಕ್ಕಳಿಗೆ ಯುವಕರಿಗೆ ಇದರಿಂದಾಗುವ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸಬೇಕಾಗಿದೆ.

ಮಾದಕ ವಸ್ತುಗಳ ಚಟವು ವ್ಯಕ್ತಿಯ ಮೆದುಳಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಮೊದಮೊದಲು ಮಿತಿಯಲ್ಲಿ ಮಾದಕ ವಸ್ತುಗಳ ಸೇವನೆ ಮಾಡಿದರೂ, ನಂತರದ ದಿನಗಳಲ್ಲಿ ಅದರ ಸೇವನೆಯ ತವಕ ಹೆಚ್ಚಾಗಿ, ಮಾದಕ ವಸ್ತುಗಳನ್ನು ಸೇವನೆ ಮಾಡದೆ ಬದುಕಲು ಸಾಧ್ಯವೇ ಇಲ್ಲ ಎನ್ನುವ ಮುಟ್ಟಕ್ಕೆ ತಲುಪುತ್ತಾರೆ. ಇದರಿಂದಾಗಿ ಹೆಚ್ಚಿನ ಜನರು ಖಿನ್ನತೆಗೆ ಜಾರುವ ಸಂಭವವಿದೆ.

ಮಾದಕ ವಸ್ತುಗಳ ಸೇವಿಸುವ ವ್ಯಕ್ತಿಯು ತನ್ನ ಜವಾಬ್ದಾರಿಗಳನ್ನು ನಿರ್ಲಕ್ಷಿಸಲಾರಂಭಿಸುತ್ತಾನೆ. ಮಾದಕ ವಸ್ತುವಿನ ಮತ್ತಿನಲ್ಲಿ ಅಪಾಯಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಂಭವವಿರುತ್ತದೆ. ಇದರ ಅಮಲಿನಲ್ಲಿ ಅಪಘಾತ ಹಾಗೂ ಅಪರಾಧಗಳನ್ನು ಎಸಗಬಹುದು ಅಲ್ಲದೆ ಸಂಬಂಧಗಳಲ್ಲೂ ಬಿರುಕು ಉಂಟಾಗುತ್ತದೆ.

ಧ್ಯಾನ ಯೋಗ ಮಾಡುವುದರಿಂದ, ಮಾನಸಿಕ ವಿಧಾನದಿಂದ ಚಿಕಿತ್ಸೆ ನೀಡಿ, ವ್ಯಸನದಿಂದ ಬಳಲುತ್ತಿರುವ ರೋಗಿಗಳನ್ನು ಪ್ರೀತಿ ಅಕ್ಕರೆಯಿಂದ ಕಾಣುವ ಮೂಲಕ ಮಾದಕ ವಸ್ತುಗಳ ಸೇವನೆಯನ್ನು ತಪ್ಪಿಸಬಹುದು.

ಮಾದಕ ವ್ಯಸನವು ವ್ಯಕ್ತಿಯನ್ನು ಕಲ್ಪನಾ ಲೋಕಕ್ಕೆ ಕರೆದೊಯ್ದು ಭ್ರಮೆಯನ್ನು ಹುಟ್ಟಿಸುತ್ತದೆ. ತನ್ಮೂಲಕ ವಾಸ್ತವ ಪ್ರಪಂಚದ ಅರಿವನ್ನು ಮರೆಸುತ್ತದೆ. ಇದು ಎಲ್ಲಕ್ಕಿಂತ ಅಪಾಯಕಾರಿ. ರಾಷ್ಟ್ರದ ಬೆನ್ನೆಲುಬಾದ ಯುವಕರೇ ಈ ಚಟದ ದಾಸರಾದರೆ ದೇಶವೇ ಮುಳುಗಿದಂತೆ. ಆದ್ದರಿಂದ ಜಾಗೃತಿಯು ಸಮಾಜದಲ್ಲೂ ಪ್ರತಿಯೊಬ್ಬರ ಮನೆ ಮನದಲ್ಲೂ ಅತ್ಯವಶ್ಯ. ಮಾದಕ ವಸ್ತು ನಿರ್ಮೂಲನ ದಿನದ ಶುಭ ಅವಸರದಲ್ಲಿ ನಮ್ಮೆಲ್ಲರ ನಿರ್ಧಾರ ಇದನ್ನು ಬಹಿಷ್ಕರಿಸುವ, ಇದರ ದುಷ್ಪರಿಣಾಮಗಳ ವಿರುದ್ಧ ಜಾಗೃತಿ ಮೂಡಿಸುವ ಅಭಿಯಾನದೊಂದಿಗೆ ಆರಂಭವಾಗಲಿ.

ಮಾದಕ ವಸ್ತುಗಳು ಎಂದಿಗೂ ಮಾರಕ
ಯುವ ಜಾಗೃತಿಯೇ ಆಗಲಿ ಕಾಯಕ

**– ಚೇತನ ಭಾರ್ಗವ, ಅರಮನೆ ತೋಟ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ವಿಜ್ಞಾನ ಕಲಿಕೆ ಹೀಗಿರಲಿ
# ದೈನಂದಿನ ಜೀವನದಲ್ಲಿ ಅಯಸ್ಕಾಂತಗಳ ಪಾತ್ರ



ವಿಜ್ಞಾನ ಎಂಬುದು ಕಬ್ಬಿಣದ ಕಡಲೆಯಾಗದೇ, ಕಬ್ಬಿನ ರಸವಾಗಬೇಕೆಂದರೆ ಕೇವಲ ಅಂಕಗಳಿಸುವ ಉದ್ದೇಶಕ್ಕಾಗಿ ಬಾಯಿಪಾಠ ಮಾಡುವ ಮೂಲಕ ಅಧ್ಯಯನ ಮಾಡದೇ, ಅದರಲ್ಲಿನ ಪ್ರತಿಯೊಂದು ಪರಿಕಲ್ಪನೆಗಳನ್ನು ಏನು? ಏಕೆ? ಹೇಗೆ? ಹಾಗೂ ನಿತ್ಯ ಜೀವನದಲ್ಲಿ ಅದರ ಮಹತ್ವವೇನು? ಎಂಬ ಹಲವಾರು ಪ್ರಶ್ನೆಗಳ ಮೂಲಕ ತಿಳಿದುಕೊಳ್ಳಬೇಕು. ಸರ್ ಸಿ ವಿ ರಾಮನ್ ಅವರು ವಿಜ್ಞಾನ ಕಲಿಕೆಯ ಕುರಿತು ವಿಜ್ಞಾನ ಅಧ್ಯಯನಕ್ಕೆ ಬೇಕಾಗಿರುವುದು ಬೆಲೆ ಬಾಳುವ ಉಪಕಣಗಳಲ್ಲ, ಬದಲಾಗಿ ದೃಢ ಮನಸ್ಸು, ಸಾಧಿಸುವ ಛಲ, ಏಕಾಗ್ರತೆ, ಕುತೂಹಲ, ಆತ್ಮವಿಶ್ವಾಸಗಳೆಂಬ ಉಪಕರಣಗಳು ಅತ್ಯವಶ್ಯಕ "ವಿಜ್ಞಾನದ ಮೂಲ ತತ್ವ ಕೇವಲ ಉಪಕರಣಗಳಲ್ಲ. ಸ್ವತಂತ್ರವಾಗಿ ಆಲೋಚಿಸುವುದು ಹಾಗೂ ಶ್ರಮದ ದುಡಿಮೆ" ಎಂಬ ಮಾತು ಅಕ್ಷರಶಃ ಸತ್ಯ ಸಂಗತಿಯಾಗಿದೆ. ಪಠ್ಯಪುಸ್ತಕದಲ್ಲಿನ ಪ್ರತಿಯೊಂದು ಪರಿಕಲ್ಪನೆಗಳು ನಿತ್ಯ ಜೀವನದಲ್ಲಿ ಎಲ್ಲಿ ಕಂಡುಬರುತ್ತವೆ? ಅವುಗಳ ಮಹತ್ವವೇನು? ಎಂಬುದನ್ನು ಅರಿತುಕೊಳ್ಳಬೇಕಾಗುತ್ತದೆ. ಪ್ರಶ್ನಿಸದೇ ಯಾವುದನ್ನು ಒಪ್ಪಬಾರದು ಎಂಬುದೇ ವಿಜ್ಞಾನದ ಮೂಲ ತತ್ವವಾಗಿದೆ. ಇವುಗಳಿಗೆ ಸಂಬಂಧಿಸಿದಂತೆ ಕೆಲವು ವಿಜ್ಞಾನದ ಪರಿಕಲ್ಪನೆಗಳನ್ನು ನೋಡೋಣ..



ರಾಜು. ಭೂಶೆಟ್ಟಿ, ಹುಬ್ಬಳ್ಳಿ

Scan For Digital Colourful
HAMPI TIMES E-paper

ಅಯಸ್ಕಾಂತಗಳು ಕೆಲವು ವಸ್ತುಗಳನ್ನು, ವಿಶೇಷವಾಗಿ ಕಬ್ಬಿಣ, ನಿಕಲ್ ಮತ್ತು ಕೋಬಾಲ್ಟ್ ಅನ್ನು ಆಕರ್ಷಿಸುವ ವಸ್ತುಗಳು. ಅವುಗಳನ್ನು ಅನೇಕ ಉಪಕರಣಗಳು, ಸಾಧನಗಳು ಮತ್ತು ದೈನಂದಿನ ಸಂದರ್ಭಗಳಲ್ಲಿ ಬಳಸಲಾಗುತ್ತದೆ.


ರೆಫ್ರಿಜರೇಟರ್ ಬಾಗಿಲುಗಳು: ಆಯಸ್ಕಾಂತಗಳು ರೆಫ್ರಿಜರೇಟರ್ ಬಾಗಿಲಗಳನ್ನು ಬಿಗಿಯಾಗಿ ಮುಚ್ಚಲು ಸಹಾಯ ಮಾಡುತ್ತದೆ. ಫ್ರಿಜ್ ಬಾಗಿಲುಗಳ ಮೇಲೆ ಟಿಪ್ಪಣಿಗಳು, ಚಿತ್ರಗಳು ಅಥವಾ ಜ್ಞಾಪನೆಗಳನ್ನು ಅಂಟಿಸಲು ಬಳಸಲಾಗುತ್ತದೆ. ಸ್ಪೀಕರ್‌ಗಳು ಮತ್ತು ಹೆಡ್‌ಫೋನ್‌ಗಳು: ಈ ಸಾಧನಗಳ ಒಳಗೆ, ಕಂಪನಗಳನ್ನು ಬಳಸಿಕೊಂಡು ಗಾಳಿಯನ್ನು ಚಲಿಸುವ ಮೂಲಕ ಆಯಸ್ಕಾಂತಗಳು ಧ್ವನಿಯನ್ನು ರಚಿಸಲು ಸಹಾಯ ಮಾಡುತ್ತವೆ. ಟೆಲಿವಿಷನ್‌ಗಳು, ರೇಡಿಯೋಗಳು ಮತ್ತು ಕಂಪ್ಯೂಟರ್‌ಗಳಲ್ಲಿಯೂ ಅಯಸ್ಕಾಂತವನ್ನು ಬಳಸಲಾಗುತ್ತದೆ. ಕಿವಿಯೋಲೆ ಮತ್ತು ನೆಕ್ಲೇಸ್‌ಗಳಂತಹ ಕೆಲವು ಆಭರಣಗಳನ್ನು ಮುಚ್ಚುವಿಕೆಗೆ ಅಯಸ್ಕಾಂತಗಳನ್ನು ಬಳಸಲಾಗುತ್ತದೆ. ವಿದ್ಯುತ್ ಮೋಟಾರ್‌ಗಳು ಮತ್ತು ಜನರೇಟರ್‌ಗಳು: ವಿದ್ಯುತ್ ಉತ್ಪಾದಿಸಲು ಮತ್ತು ಫ್ಯಾನ್‌ಗಳು, ವಾಷಿಂಗ್ ಮಷಿನ್‌ಗಳು ಇತ್ಯಾದಿಗಳನ್ನು ಚಲಾಯಿಸಲು ಆಯಸ್ಕಾಂತಗಳನ್ನು ಬಳಸಲಾಗುತ್ತದೆ. ಕ್ರೆಡಿಟ್ ಕಾರ್ಡ್‌ಗಳು ಮತ್ತು ಎಟಿಎಂ ಕಾರ್ಡ್‌ಗಳು: ಈ ಕಾರ್ಡ್‌ಗಳ ಹಿಂಭಾಗದಲ್ಲಿರುವ ಮ್ಯಾಗ್ನೆಟಿಕ್ ಸ್ಟ್ರೈಪ್ ಡೇಟಾವನ್ನು ಸಂಗ್ರಹಿಸುತ್ತದೆ. ಮ್ಯಾಗ್ಲೆವ್ ರೈಲುಗಳು:ಕಾಂತೀಯವಾಗಿ ತೇಲುವಂತೆ ಮಾಡುವ (ಮ್ಯಾಗ್ಲೆವ್) ರೈಲುಗಳು ಹಳಿಗಳ ಮೇಲೆ ತೇಲಲು ಅಯಸ್ಕಾಂತಗಳನ್ನು ಬಳಸುತ್ತವೆ. ಇದು ಹೆಚ್ಚಿನ ವೇಗದ ಪ್ರಯಾಣವನ್ನು ಸಕ್ರಿಯಗೊಳಿಸುತ್ತದೆ. ಆಟೋಮೊಬೈಲ್‌ನ ವಿವಿಧ ಘಟಕಗಳಲ್ಲಿ ಬಳಸಲಾಗುತ್ತದೆ. ಕೆಲವು ಮುರಿದ ವಸ್ತುಗಳ ಮರುಬಳಕೆ ಕೇಂದ್ರಗಳಲ್ಲಿ ಭಾರವಾದ ಲೋಹದ ವಸ್ತುಗಳನ್ನು ಎತ್ತಲು ಮತ್ತು ಚಲಿಸಲು ದೊಡ್ಡ ಕೈಗಾರಿಕಾ ಅಯಸ್ಕಾಂತಗಳನ್ನು ಬಳಸಲಾಗುತ್ತದೆ. ಮರುಬಳಕೆ ಮತ್ತು ಇತರ ಕೈಗಾರಿಕಾ ಪ್ರಕ್ರಿಯೆಗಳಲ್ಲಿ ಕಾಂತೀಯ ವಸ್ತುಗಳನ್ನು ಕಾಂತೀಯವಲ್ಲದ ವಸ್ತುಗಳಿಂದ ಬೇರ್ಪಡಿಸಲು ಅಯಸ್ಕಾಂತಗಳನ್ನು ಬಳಸಲಾಗುತ್ತದೆ. ವಿವಿಧ ಸಂವೇದಕಗಳಲ್ಲಿ ಮತ್ತು ಹಾರ್ಡ್‌ಡ್ರೈವ್‌ಗಳು ಇತರ ಕಾಂತೀಯ ಮಾಧ್ಯಮಗಳಲ್ಲಿ ಡೇಟಾ ಸಂಗ್ರಹಣೆಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತದೆ. ಮ್ಯಾಗ್ನೆಟಿಕ್ ಲಾಕ್‌ಗಳು: ಕೆಲವು ಪ್ರಕಾರದ ಬಾಗಿಲುಗಳನ್ನು ಸುರಕ್ಷಿತವಾಗಿ ಲಾಕ್ ಮತ್ತು ಅನ್‌ಲಾಕ್ ಮಾಡಲು ಆಯಸ್ಕಾಂತಗಳನ್ನು ಬಳಸುತ್ತವೆ. ಆಟಿಕೆ ಕಾರುಗಳು ಮತ್ತು ಆಟಗಳು: ಅನೇಕ ಮಕ್ಕಳ ಆಟಿಕೆಗಳ ಭಾಗಗಳನ್ನು ಚಲಿಸಲು ಅಥವಾ ತುಣುಕುಗಳನ್ನು ಸಂಪರ್ಕಿಸಲು ಆಯಸ್ಕಾಂತಗಳನ್ನು ಬಳಸಲಾಗುತ್ತದೆ. ಮ್ಯಾಗ್ನೆಟಿಕ್ ದಿಕ್ಸೂಚಿಗಳು: ದಿಕ್ಸೂಚಿ ಸೂಜಿಯು ದಿಕ್ಕನ್ನು ನಿರ್ಧರಿಸಲು ಸಹಾಯ ಮಾಡುತ್ತದೆ. ವೈದ್ಯಕೀಯ ಉಪಕರಣಗಳು: ಎಂಆರ್‌ಐ ಯಂತ್ರಗಳು (ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್) ದೇಹದ ಒಳಗಿನ ಚಿತ್ರಗಳನ್ನು ತೆಗೆದುಕೊಳ್ಳಲು ಬಲವಾದ ಆಯಸ್ಕಾಂತಗಳನ್ನು ಬಳಸುತ್ತವೆ. ಸ್ಕ್ರೂಗಳು ಮತ್ತು ಪಿನ್‌ಗಳಂತಹ ಸಣ್ಣ ಲೋಹದ ಭಾಗಗಳನ್ನು ಎತ್ತಿಕೊಳ್ಳುವಲ್ಲಿ ಆಯಸ್ಕಾಂತಗಳು ಸಹಾಯ ಮಾಡುತ್ತವೆ.

ಒಟ್ಟಾರೆಯಾಗಿ "ಆಯಸ್ಕಾಂತಗಳು ನಮ್ಮ ದೈನಂದಿನ ಜೀವನದಲ್ಲಿ ಬಹಳ ಉಪಯುಕ್ತವಾಗಿವೆ. ವಸ್ತುಗಳನ್ನು ಮುಚ್ಚಿಡಲು, ಧ್ವನಿ ಉತ್ಪಾದಿಸಲು, ವಿದ್ಯುತ್ ಉತ್ಪಾದಿಸಲು, ಮಾಹಿತಿಯನ್ನು ಸಂಗ್ರಹಿಸಲು ಮತ್ತು ವೈದ್ಯಕೀಯ ಸ್ಕ್ಯಾನ್‌ಗಳಲ್ಲಿಯೂ ಸಹ ಅವು ನಮಗೆ ಸಹಾಯ ಮಾಡುತ್ತವೆ."

### ದೈನಂದಿನ ಜೀವನದಲ್ಲಿ ಅಮೀಟರ್‌ನ ಪಾತ್ರ

ಅಮೀಟರ್ ಎಂದರೆ ವಿದ್ಯುತ್ ಪ್ರವಾಹ (ಕರೆಂಟ್) ಎಷ್ಟು ಹರಿಯುತ್ತಿದೆ ಎಂಬುದನ್ನು ತೋರಿಸುವ ಒಂದು ಸಾಧನ. ಇದನ್ನು ಆಂಪಿಯರ್‌ಗಳಲ್ಲಿ ಮಾಪನೆ ಮಾಡುತ್ತದೆ. ಇದು ಗೃಹೋಪಯೋಗಿ ಉಪಕರಣಗಳಿಂದ ಹಿಡಿದು ಕೈಗಾರಿಕಾ ಯಂತ್ರೋಪಕರಣಗಳವರೆಗೆ ದೈನಂದಿನ ಜೀವನದ ವಿವಿಧ ಅಂಶಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮೂಲಭೂತವಾಗಿ ಇದು ವಿದ್ಯುತ್ ಹರಿವನ್ನು ಮೇಲ್ವಿಚಾರಣೆ ಮಾಡುವ ಮೂಲಕ ವಿದ್ಯುತ್ ವ್ಯವಸ್ಥೆಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತವೆ.

ವಿದ್ಯುತ್ ಉಪಕರಣಗಳ ತಪಾಸಣೆ: ರೆಫ್ರಿಜರೇಟರ್‌ಗಳು, ಹೀಟರ್‌ಗಳು, ಫ್ಯಾನ್, ಟಿವಿ, ವಾಷಿಂಗ್ ಮಷಿನ್‌ಗಳಂತಹ ಉಪಕರಣಗಳ ವಿದ್ಯುತ್ ಬಳಸುವ ಪ್ರಮಾಣವನ್ನು ಪರಿಶೀಲಿಸಲು ಅಮ್ಮೀಟರ್ ಗಳನ್ನು ಬಳಸಬಹುದು. ಇದು ಓವರ್ ಲೋಡ್‌ಗಳು ಅಥವಾ ಅಸರ್ಪಕ ಕಾರ್ಯಗಳಂತಹ ಸಂಭಾವ್ಯ ಸಮಸ್ಯೆಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ವಿದ್ಯುತ್ ಔಟ್‌ಲೆಟ್‌ಗಳು ಮತ್ತು ಸರ್ಕ್ಯೂಟ್ ಗಳಲ್ಲಿ ವಿಶೇಷವಾಗಿ ದುರಸ್ತಿ ಕೆಲಸದ ಸಮಯದಲ್ಲಿ ಅಥವಾ ಫ್ಯೂಸ್ ಗಳನ್ನು ಬದಲಾಯಿಸುವಾಗ ವಿದ್ಯುತ್ಪ್ರವಾಹವನ್ನು ಪರಿಶೀಲಿಸಲು ಅಮ್ಮೀಟರ್ ಬಳಸಲಾಗುತ್ತದೆ. ಕೈಗಾರಿಕಾ ವ್ಯವಸ್ಥೆಯಲ್ಲಿ ವಿವಿಧ ಯಂತ್ರಗಳಲ್ಲಿ ವಿದ್ಯುತ್ ಹರಿವನ್ನು ಮೇಲ್ವಿಚಾರಣೆ ಮಾಡಲು, ಅವು ಸುರಕ್ಷಿತ ಮತ್ತು ಸೂಕ್ತ ನಿಯತಾಂಕಗಳಲ್ಲಿ ಕಾರ್ಯನಿರ್ವಹಿಸುವುದನ್ನು ಖಚಿತಪಡಿಸಿಕೊಳ್ಳಲು ಬಳಸುವರು. ಹೆಚ್ಚಿನ ಕರೆಂಟ್ ಹರಿಯುತ್ತಿದ್ದರೆ ಶಾರ್ಟ ಸರ್ಕ್ಯೂಟ್ ಅಥವಾ ವ್ಯವಸ್ಥೆಯಲ್ಲಿನ ಇತರ ಅಸಮರ್ಪಕ ಕಾರ್ಯವನ್ನು ಸೂಚಿಸುತ್ತದೆ. ನಿಗದಿತಕ್ಕಿಂತ ಕಡಿಮೆ ಕರೆಂಟ್ ಹರಿಯುತ್ತಿದ್ದರೆ ಸರ್ಕ್ಯೂಟ್‌ನಲ್ಲಿ ಅಡಚಣೆಗಳು ಅಥವಾ ಹೆಚ್ಚಿನ ಪ್ರತಿರೋಧವನ್ನು ಸೂಚಿಸಬಹುದು. ಹೀಗಾಗಿ ಸರ್ಕ್ಯೂಟ್‌ನಲ್ಲಿನ ಈ ರೀತಿಯ ದೋಷಗಳನ್ನು ಪತ್ತೆ ಹಚ್ಚಲು ಅಮೀಟರ್ ಗಳು ಸಹಾಯಕ. ವಾಹನಗಳಲ್ಲಿ: ಕಾರು ಮತ್ತು ಬೈಕ್‌ಗಳ ಬ್ಯಾಟರಿಗಳಲ್ಲಿ ವಿದ್ಯುತ್ ಸರಬರಾಜು ಸರಿಯಾಗಿ ನಡೆಯುತ್ತಿದೆಯೇ ಎಂಬುದನ್ನು ತಪಾಸಿಸಲು.




ವಿದ್ಯುತ್ ಸಮಸ್ಯೆಗಳನ್ನು ಪತ್ತೆಹಚ್ಚಲು ಮತ್ತು ಸರಿಪಡಿಸಲು ಎಲೆಕ್ಟ್ರಿಷಿಯನ್‌ಗಳು ಮತ್ತು ತಂತ್ರಜ್ಞರಿಗೆ ಅಮೀಟರ್‌ಗಳು ಅತ್ಯಗತ್ಯ ಸಾಧನಗಳಾಗಿವೆ. ಶಾಲಾ-ಕಾಲೇಜುಗಳಲ್ಲಿ ಪ್ರಾಯೋಗಿಕವಾಗಿ ವಿದ್ಯುತ್ ಪ್ರವಾಹವನ್ನು ಅಳವಡಿಸಲು. ಉದ್ಯಮಗಳಲ್ಲಿ: ವಿದ್ಯುತ್ ಉಪಕರಣಗಳ ಬಳಕೆಯ ಮೇಲೆ ನಿಗಾವಹಿಸಲು, ಹೆಚ್ಚು ಪ್ರವಾಹ ಹರಿಯದಂತೆ ಎಚ್ಚರಿಕೆ ನೀಡಲು. ಸಹಾಯಕವಾಗಿದೆ. ಹೆಚ್ಚಿನ ವಿದ್ಯುತ್ ಪ್ರವಾಹದಿಂದ ಉಪಕರಣ ಹಾನಿಯಾಗದಂತೆ ತಡೆಯಲು ಅಮೀಟರ್ ಸಹಾಯಕವಾಗುತ್ತದೆ.

# ಮಾದಕ ವ್ಯಸನ ಮುಕ್ತ ಸಮಾಜವಾಗಲಿ

**– ಪ್ರಜ್ಞಾ ರವೀಶ್ ಕುಳಮರ್ವ, ಕಾಸರಗೋಡು.**

ಆಧುನಿಕ ನಾಗರಿಕ ಸಮಾಜದ ಅತಿ ದೊಡ್ಡ ದುರಂತವೆಂದರೆ ಈ ಮಾದಕ ವಸ್ತುಗಳ ಸೇವನೆ ಎಂದೇ ಹೇಳಬಹುದು. ಅನೇಕರು ಒಂದಲ್ಲಾ ಒಂದು ಕಾರಣಗಳಿಂದ ಮಾದಕ ವ್ಯಸನಕ್ಕೆ ಒಳಗಾಗುತ್ತಲೇ ಇರುತ್ತಾರೆ. ಹದಿ ಹರೆಯದ ಅನೇಕರು ಪ್ರೇಮ ವೈಫಲ್ಯದ ಕಾರಣದಿಂದಾಗಿ ಮಾದಕ ವ್ಯಸನಿಗಳಾಗುತ್ತಿದ್ದಾರೆ ಎನ್ನುವುದು ವಿಪರ್ಯಾಸ!! ಬ್ರೌನ್ ಶುಗರ್, ಗಾಂಜಾ, ಕೊಕೈನ್, ಮರಿಜುವಾನ, ಅಫೀಮು, ಧೂಮಪಾನ, ಮದ್ಯಪಾನ ಮುಂತಾದ ಮಾದಕ ವ್ಯಸನಗಳ ದಾಸನಾದರೆ ಅವುಗಳಿಂದ ಹೊರ ಬರುವುದು ಬಲು ಕಠಿಣವೇ ಸರಿ.

ಈಗೀಗ ಮಾದಕ ವ್ಯಸನಗಳ ದೊಡ್ಡ ದಂಧೆಯೇ ನಡೆಯುತ್ತಿದೆ ಎನ್ನಬಹುದು. ಶಾಲಾ ಕಾಲೇಜುಗಳ ಆವರಣದಲ್ಲಿರುವ ಅನೇಕ ಅಂಗಡಿಗಳಲ್ಲಿ ಬ್ರೌನ್ ಶುಗರ್, ಗಾಂಜಾ ಮುಂತಾದ ಮಾದಕ ವಸ್ತುಗಳನ್ನು ಮಾರುವ ದೊಡ್ಡ ದಂಧೆಯೇ ನಡೆಯುತ್ತಿದೆ!!, ಕೆಲವು ವ್ಯಾಪಾರಸ್ಥರು ತಮ್ಮ ವ್ಯಾಪಾರದ ಲಾಭಕ್ಕಾಗಿ ಮಾದಕ ವಸ್ತುಗಳನ್ನು ಬಲು ಗುಟ್ಟಾಗಿ, ವ್ಯವಸ್ಥಿತವಾಗಿ ಮಾರಾಟ ಮಾಡುತ್ತಿದ್ದಾರೆ!!, ಇದರಿಂದ ಯುವ ಪೀಳಿಗೆಯು ದಾರಿ ತಪ್ಪುತ್ತಿರುವುದಂತೂ ನಿಜ.

ತಮ್ಮ ಮನಸ್ಸಿನ ಸಂತೋಷಕ್ಕೆಂದೋ, ನೋವುಗಳನ್ನು ಮರೆಯಲೆಂದೋ ಹೀಗೆ ಹತ್ತು ಹಲವು ಕಾರಣಗಳಿಂದ ಅನೇಕರು ಇಂದು ಮಾದಕ ವ್ಯಸನಿಗಳಾಗುತ್ತಿದ್ದಾರೆ. ಮಾದಕ ವ್ಯಸನದಿಂದ ಆರೋಗ್ಯದ ಮೇಲೆ ಅನೇಕ ದುಷ್ಪರಿಣಾಮಗಳು ಬೀರುತ್ತವೆ. ಒಮ್ಮೆ ಮಾದಕ ವ್ಯಸನ ನಮ್ಮ ದೇಹದೊಳಗೆ ಸೇರಿದರೆ ಅದೇನೋ ಉನ್ಮಾದ ಬಂದಂತೆ ಅನಿಸಿ, ಅವುಗಳನ್ನು ಮತ್ತೆ ಮತ್ತೆ ಬಳಸುವಂತೆ ಪ್ರೇರೇಪಿಸುತ್ತದೆ. ಯುವ ಪೀಳಿಗೆಯು ಮಾದಕ ವಸ್ತುಗಳಿಂದ ಮನಕೆ ಬಹಳ ನೆಮ್ಮದಿ ಸಿಗುವುದೆಂಬ ಭ್ರಮೆಯಲ್ಲಿ ಪದೇ ಪದೇ ಮಾದಕ ವ್ಯಸನಗಳಿಗೆ ಬಲಿಯಾಗುತ್ತಲೇ ಇದ್ದಾರೆ ಎಂಬುದು ಬಹಳ ದುಃಖದ ಸಂಗತಿ.

ಕೊಕೈನ್, ಹೆರಾಯಿನ್ ಮುಂತಾದ ಮಾದಕ ದ್ರವ್ಯಗಳ ಬಳಕೆಯಿಂದ ನೇರವಾಗಿ ಮೆದುಳು ಹಾಗೂ ನರ ಮಂಡಲಕ್ಕೆ ಅನೇಕ ದುಷ್ಪರಿಣಾಮಗಳನ್ನು ತಂದೊಡ್ಡುತ್ತವೆ. ಮನಸ್ಸು ನಮ್ಮ ನಿಯಂತ್ರಣವನ್ನು ತಪ್ಪಿ ಅನೇಕ ಅಪರಾಧಗಳನ್ನು ಮಾಡುವಂತೆ ಪ್ರೇರೇಪಿಸುತ್ತದೆ. ಜಗತ್ತಿನಲ್ಲಿ ಅನೇಕ ಕಳ್ಳತನ, ದರೋಡೆ, ಅಪಘಾತಗಳು ಮುಂತಾದ ನಾನಾ ರೀತಿಯ ಅಪರಾಧಗಳು ನಡೆಯುವುದು ಈ ಮಾದಕ ವ್ಯಸನಿಗಳಿಂದಲೇ.

### ಮಾದಕ ದ್ರವ್ಯಗಳ ನಿಷೇಧ ಹೇಗೆ?

**ಮಾದಕ ವಸ್ತುಗಳ ನಿಷೇಧದ ಕುರಿತು ಸರ್ಕಾರ ಬಲು ಕಠಿಣವಾದ ಕಾನೂನು ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ.**
**ಶಾಲಾ, ಕಾಲೇಜ್ ಗಳ ಆವರಣದೊಳಗೆ ಮಾದಕ ವಸ್ತುಗಳ ಸರಬರಾಜುಗಳನ್ನು ನಿಷೇಧಿಸಬೇಕಿದೆ.**
**ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತಾಗಿ ಅಗತ್ಯವಾದ ಮಾಹಿತಿಗಳನ್ನು ಶಾಲಾ, ಕಾಲೇಜ್ ಪಠ್ಯ ಪುಸ್ತಕಗಳಲ್ಲಿ ಅಳವಡಿಸಬೇಕಿದೆ.**
**ಸುಂದರ, ನೆಮ್ಮದಿಯ ಜೀವನಕ್ಕೆ ಮಾದಕ ವಸ್ತುಗಳ ನಿಷೇಧ ಬಲು ಅಗತ್ಯವಿದೆ.**
**ಮಾದಕ ವ್ಯಸನಗಳ ಮುಕ್ತ ಸಮಾಜ ಎಲ್ಲರ ಜವಾಬ್ದಾರಿಯೂ ಆಗಿದೆ.**

ಮಾದಕ ವ್ಯಸನಗಳು ಇತರರ ಉಪಟಳಕ್ಕೆ ಪ್ರಚೋದಿಸುವುದು ಮಾತ್ರವಲ್ಲದೆ ತನ್ನನ್ನೇ ಆತ್ಮಹತ್ಯೆ ಮಾಡಿಕೊಳ್ಳುವಂತೆಯೂ ಪ್ರೇರೇಪಿಸುತ್ತದೆ!!, ಮೊದ ಮೊದಲು ಕಡಿಮೆ ಇದ್ದ ಚಟ ದಿನಗಳೆಯುತ್ತಾ ಹೋದಂತೆ ಅಧಿಕವಾಗಿ ಅವುಗಳ ವಶಕ್ಕೆ ಒಳಗಾಗುವ ಪರಿಸ್ಥಿತಿ ಬರುತ್ತದೆ. ಇದರಿಂದ ಮನುಷ್ಯ ದೈಹಿಕವಾಗಿ ಕೃಶವಾಗುವುದರ ಜೊತೆಗೆ ಮಾನಸಿಕವಾಗಿ ಅಸ್ಥಿರಗೊಂಡು, ಸಮಾಜದಲ್ಲಿ ತನ್ನ ಗೌರವ, ಘನತೆ, ಸ್ಥಾನಮಾನವನ್ನು ಕಳೆದುಕೊಳ್ಳುತ್ತಾನೆ.

ಮಾದಕ ವ್ಯಸನಗಳಿಂದ ಹಚ್ಚ ಹಸುರಾಗಿದ್ದ ಸಂಬಂಧಗಳು ಕೆಡುತ್ತವೆ, ಗಂಡ ಹೆಂಡತಿಯರ ಮಧ್ಯೆ ಜಗಳಗಳು, ಭಿನ್ನಾಭಿಪ್ರಾಯಗಳು, ಪರಸ್ಪರ ಪ್ರೀತಿ, ಕಾಳಜಿಗಳು ಮರೆಯಾಗುತ್ತವೆ. ಇದರಿಂದ ಸಂಬಂಧಗಳು ನುಚ್ಚು ನೂರಾಗುತ್ತವೆ. ಇವುಗಳ ದುಷ್ಪರಿಣಾಮದಿಂದ ಮಕ್ಕಳ ಮನಸ್ಸಿನ ಮೇಲೆಯೂ ಬಲು ದೊಡ್ಡ ಪರಿಣಾಮವನ್ನೇ ಬೀರುತ್ತವೆ. ಮಕ್ಕಳು ಕೂಡ ಸಂಸ್ಕಾರ ಹೀನರಾಗಿ ಬೆಳೆದು, ಮುಂದೆ ಅವರೂ ಕೂಡ ಹಿರಿಯರನ್ನೇ ಅನುಸರಿಸಿ, ಹಿರಿಯರ ದಾರಿಯನ್ನೇ ಹಿಡಿಯುವ ಸಾಧ್ಯತೆಗಳೂ ಇರುತ್ತವೆ. ಹಾಗಾಗಿ ಮಾದಕ ವ್ಯಸನಗಳಿಂದ ದೂರವಾಗುವುದೇ ಲೇಸು.

ಮಾದಕ ವ್ಯಸನಿಗಳು ಮಾದಕ ವ್ಯಸನಗಳಿಂದ ಬಲು ಬೇಗ ಸಾವಿಗೆ ಹತ್ತಿರವಾಗುತ್ತಾರೆ. ಶ್ವಾಸಕೋಶದ ಸಮಸ್ಯೆಗಳು, ಟಿ.ಬಿ, ಮೂತ್ರ ಕೋಶದ ಸಮಸ್ಯೆಗಳು ಹೀಗೆ ಒಂದೇ ಎರಡೇ?!, ಬಹು ಅಂಗಾಗ ಖಾಯಿಲೆಗಳಿಗೆ ತುತ್ತಾಗಿ ನರಳುವ ಪರಿಸ್ಥಿತಿ ಬಂದೊದಗುತ್ತದೆ. ಇದರ ಅರಿವಿದ್ದರೂ ಆಗಾಗ ಮಾದಕ ವ್ಯಸನಗಳ ಮೊರೆ ಹೋಗುತ್ತಿರುವುದು ವಿಪರ್ಯಾಸ!!

ಮಾದಕ ವ್ಯಸನಗಳಿಂದ ಮುಕ್ತಿ ಪಡೆಯುವುದು ಹೇಗೆ?

ಪ್ರಯತ್ನ ಪಟ್ಟರೆ ಮಾದಕ ವ್ಯಸನಗಳಿಂದ ಮುಕ್ತಿ ಪಡೆಯಲು ಸಾಧ್ಯವಿದೆ. ಅನೇಕರು ಮಾದಕ ವ್ಯಸನಗಳಿಂದ ಬಿಡುಗಡೆ ಪಡೆದ ಅನೇಕ ಉದಾಹರಣೆಗಳಿವೆ. ಮಾದಕ ವ್ಯಸನಗಳ ಬಿಡುಗಡೆಯೆಡೆಗೆ ದೃಢವಾದ ಸಂಕಲ್ಪ ಬೇಕಾಗುತ್ತದೆ. ಮಾದಕ ವ್ಯಸನಗಳ ದುಷ್ಪರಿಣಾಮಗಳು ಅನೇಕ ಎಂದು ಅರಿತು, ಇನ್ನು ಮುಂದೆ ಮಾದಕ ವ್ಯಸನಿಯಾಗಲಾರೆ ಎಂಬ ನಿಲುವಿನಲ್ಲಿ ದಿಟ್ಟ ಹೆಜ್ಜೆ ಇಟ್ಟರೆ ಮಾದಕ ವ್ಯಸನಗಳಿಂದ ಬಿಡುಗಡೆ ಹೊಂದಬಹುದಾಗಿದೆ.

ಎಲ್ಲವೂ ನಮ್ಮ ಮನಸ್ಸಿನಲ್ಲಿಯೇ ಅಡಗಿದೆ. ಮನಸ್ಸನ್ನು ನಿಯಂತ್ರಣದಲ್ಲಿರಿಸಿ ಒಮ್ಮೆ ನಮ್ಮ ಅಂತರಂಗವನ್ನು ಕೇಳಿಕೊಂಡಾಗ ನಮಗೆ ಉತ್ತರವೂ ಲಭಿಸುತ್ತದೆ. ಮಾದಕ ವ್ಯಸನಗಳ ದಾಸನಾಗಬಾರದಿತ್ತು ಎಂಬ ಪಾಪ ಪ್ರಜ್ಞೆಯು ಕಾಡುತ್ತದೆ. ಪಾಪ ಪ್ರಜ್ಞೆ ಕಾಡಿದಾಗಲೇ ಅವುಗಳಿಂದ ದೂರವಿರುವುದು ಸೂಕ್ತ ಇಲ್ಲವೆಂದರೆ ದಿನ ಕಳೆಯುತ್ತಾ ಹೋದಂತೆ ಅವುಗಳ ದಾಸನಾಗಬೇಕಾಗುತ್ತದೆ.

ಮಾದಕ ವ್ಯಸನಿಗಳ ಬಿಡುಗಡೆಗೆ ಈಗೀಗ ಅನೇಕ ಶಿಬಿರಗಳು ತೆರೆಯಲ್ಪಟ್ಟಿವೆ. ಆ ಶಿಬಿರಗಳಲ್ಲಿ ಮಾದಕ ವ್ಯಸನಗಳ ದುಷ್ಪರಿಣಾಮಗಳ ಬಗ್ಗೆ ಸರಿಯಾಗಿ ಅರಿವು ಮೂಡಿಸಿ, ಮಾದಕ ವ್ಯಸನಿಗಳ ಮನ ಪರಿವರ್ತನೆ ಮಾಡಿ ಅವರನ್ನು ವ್ಯಸನಗಳಿಂದ ಹೊರ ತಂದ ಅದೆಷ್ಟೋ ಉದಾಹರಣೆಗಳೂ ಇವೆ.

ಮಾದಕ ವ್ಯಸನಿಗಳು ಮಾದಕ ವ್ಯಸನಗಳಿಂದ ಮುಕ್ತಿ ಹೊಂದಲು ಕುಟುಂಬದವರ ಪ್ರೋತ್ಸಾಹ, ಸಹಕಾರ ಬಲು ಅಗತ್ಯ. ಕುಟುಂಬದ ಸದಸ್ಯರು ಮಾದಕ ವ್ಯಸನಿಗಳಿಗೆ ಧೈರ್ಯ ತುಂಬಿ, ಆತ್ಮವಿಶ್ವಾಸ ಹೆಚ್ಚಿಸುವಂತಹ ಮಾತುಗಳನ್ನಾಡಿ, ಅವರೊಡನೆ ಪ್ರೀತಿಯಿಂದ ನಡೆದುಕೊಂಡರೆ ಬಲು ಬೇಗ ಅವರು ಮಾದಕ ವ್ಯಸನಗಳಿಂದ ಬಿಡುಗಡೆ ಹೊಂದಲು ಸಾಧ್ಯವಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಇಂದು ಬೆಂಗಳೂರಿನಲ್ಲಿ ತುಂಗಭದ್ರಾ ಯೋಜನೆ ಹಾಗೂ ವಿಜಯನಗರ ಕಾಲುವೆಗಳ 124 ನೇ ನೀರಾವರಿ ಸಲಹಾ ಸಮಿತಿ ಸಭೆ

# ಕ್ರಸ್ಟ್ ಗೇಟ್ ಅಳವಡಿಕೆ, ನೀರು ಪೂರೈಕೆ ತೀರ್ಮಾನ

**ಹಂಪಿ ಟೈಮ್ಸ್ ಹೊಸಪೇಟೆ**

ತುಂಗಭದ್ರಾ ಯೋಜನೆಯ ಮತ್ತು ವಿಜಯನಗರ ಕಾಲುವೆಗಳ 124 ನೇ ನೀರಾವರಿ ಸಲಹಾ ಸಮಿತಿ ಸಭೆಯನ್ನು ಜೂ.27 ರಂದು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿ, ಮುನಿರಾಬಾದ್ ತುಂಗಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ತಿಳಿಸಿದ್ದಾರೆ.

2025-26 ನೇ ಸಾಲಿನ ತುಂಗಭದ್ರಾ ಜಲಾಶಯದ ಮುಂಗಾರು ಹಂಗಾಮಿಗೆ ಲಭ್ಯವಿರುವ ನೀರನ್ನು ಒದಗಿಸುವ ಕುರಿತು ನಿರ್ಣಯಿಸಲು ತುಂಗಭದ್ರಾ ಯೋಜನೆಯ ಮತ್ತು ವಿಜಯನಗರ ಕಾಲುವೆಗಳ 124 ನೇ ನೀರಾವರಿ ಸಲಹಾ ಸಮಿತಿ ಸಭೆಯನ್ನು ಬೆಂಗಳೂರು ವಿಧಾನಸೌಧದ 3ನೇ ಮಹಡಿ, ಕೊಠಡಿ ಸಂಖ್ಯೆ 334, ಸಮ್ಮೇಳನ ಸಭಾಂಗಣದಲ್ಲಿ ಜೂ.27 ರಂದು, ಅಪರಾಹ್ನ 3 ಗಂಟೆಗೆ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತವಾರಿ ಸಚಿವರು ಮತ್ತು ನೀರಾವರಿ ಸಲಹಾ ಸಮಿತಿಯ ಅಧ್ಯಕ್ಷರಾದ ಶಿವರಾಜ್.ಎಸ್.ತಂಗಡಗಿಯವರ ಅಧ್ಯಕ್ಷತೆಯಲ್ಲಿ ಜರುಗಲಿದೆ. ಸಭೆಗೆ ವಿಶೇಷ ಅಹ್ವಾನಿತರಾಗಿ ವಸತಿ, ವಕ್ಫ್, ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ರಾಯುಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಗೌಡ ಪಾಟೀಲ್, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಕೊಡಗು ಜಿಲ್ಲಾ ಉಸ್ತವಾರಿ ಸಚಿವರಾದ ಎನ್.ಎಸ್.ಬೋಸರಾಜು ಉಪಸ್ಥಿತಿಯಲ್ಲಿ ಲೋಕಸಭಾ ಸಂಸದರು, ವಿಧಾನ ಸಭಾ ಸದಸ್ಯರು,



ವಿಧಾನ ಪರಿಷತ್ ಸದಸ್ಯರು, ರಾಜ್ಯ ಸಭಾ ಸದಸ್ಯರು ಹಾಗೂ ನೀರಾವರಿ ಸಲಹಾ ಸಮಿತಿಯ ಸದಸ್ಯರು ಆಗಮಿಸಲಿದ್ದಾರೆ.

1964-1965ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಅಂದರೆ 60 ವರ್ಷಗಳಲ್ಲಿ ಜಲಾಶಯಕ್ಕೆ ವಾರ್ಷಿಕವಾಗಿ ಹರಿದು ಬಂದ ನೀರಿನ ಪ್ರಮಾಣವನ್ನು ಶೇ.75 ರ ಅವಲಂಬನೆ ಆಧಾರದ ಮೇಲೆ ಪರಿಗಣಿಸಿ, 2025-26ನೇ ಸಾಲಿನಲ್ಲಿ ಜಲಾಶಯದ ಪೂರ್ಣ ಪ್ರಮಾಣದ 105 ಟಿ.ಎಂ.ಸಿಗೆ ಎದುರಾಗಿ 177.00 ಟಿ.ಎಂ.ಸಿ ಮತ್ತು ಜಲಾಶಯದ 80.000 ಟಿ.ಎಂ.ಸಿ ಎದುರಾಗಿ 157.000 ಟಿ.ಎಂ.ಸಿ ನೀರು ಲಭ್ಯವಾಗಬಹುದೆಂದು ಅಂದಾಜಿಸಲಾಗಿರುತ್ತದೆ. ಅದರಂತೆ 2025-26ನೇ ಸಾಲಿನ ಜಲವರ್ಷದಲ್ಲಿ ಪ್ರಸಕ್ತ ಸಾಲಿಗೆ 157.000 ಟಿ.ಎಂ.ಸಿ ಗೆ ಎದುರಾಗಿ ಕರ್ನಾಟಕಕ್ಕೆ 102.931 ಟಿ.ಎಂ.ಸಿ, ಆಂದ್ರ ಪ್ರದೇಶಕ್ಕೆ 49.248 ಟಿ.ಎಂ.ಸಿ ಮತ್ತು ತೆಲಂಗಾಣಕ್ಕೆ 4.821 ಟಿ.ಎಂ.ಸಿ. ನೀರು ಲಭ್ಯವಾಗಬಹುದೆಂದು ಲೆಕ್ಕಚಾರ ಮಾಡಲಾಗಿದೆ. ಸಾಮಾನ್ಯವಾಗಿ ಜಲಾಶಯದಲ್ಲಿ ಕನಿಷ್ಟ 40 ರಿಂದ 45 ಟಿ.ಎಂ.ಸಿಯಷ್ಟು ನೀರಿನ ಸಂಗ್ರಹಣೆ ಇದ್ದ ಸಮಯದಲ್ಲಿ ಹಾಗೂ ಮುಂಗಾರು ಮಳೆ ಆಧಾರದ ಮೇಲೆ ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯದಂತೆ ಕಾಲುವೆಗಳಲ್ಲಿ ನೀರನ್ನು ಹರಿಸಲಾಗಿರುತ್ತದೆ. ಪ್ರಸ್ತುತ ಮುಂಗಾರು ಹಂಗಾಮು ಮುಂಚಿತವಾಗಿ ಪ್ರಾರಂಭವಾಗಿರುವುದರಿಂದ ಅಲ್ಲದೇ ತುಂಗಭದ್ರಾ ಮಂಡಳಿಯು ಜಲಾಶಯದ ಕ್ರಷ್ಟ್ ಗೇಟ್‌ಗಳ ದುರಸ್ಥಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಸಿಡಬ್ಲೂಸಿ ಮತ್ತು ಡಿಎಸ್‌ಆರ್‌ಪಿ ತಂಡದವರ ಸಲಹೆ ಹಾಗೂ ತುಂಗಭದ್ರಾ ಮಂಡಳಿಯ ಜೂ.3 ಸಭೆಯ ನಡುವಳಿಯಂತೆ ಪ್ರಸಕ್ತ ಸಾಲಿಗೆ 80.000 ಟಿ.ಎಂ.ಸಿಯಷ್ಟು ಮಾತ್ರ ನೀರು ಸಂಗ್ರಹಿಸಲು ಎಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಮೇಲಿನ ಅಂಶಗಳ ಅನುಗುಣವಾಗಿ 157.00 ಟಿ.ಎಂ.ಸಿಯಷ್ಟು ನೀರನ್ನು ಒಂದು ಬೆಳೆಗೆ ಮಾತ್ರ ನೀರಾವರಿಗೆ ಬಳಕೆ ಮಾಡಬಹುದಾಗಿದೆ. ಕಳೆದ 12 ವರ್ಷಗಳಲ್ಲಿ ಜೂನ್.27 ರಂದು ನೀರಿನ ಸಂಗ್ರಹಣೆ ಜಲಾಶಯದ ಮಟ್ಟ 2014 ರಲ್ಲಿ 1592.20 ಅಡಿ, 2015 ರಲ್ಲಿ 1016.85 ಅಡಿ, 2016 ರಲ್ಲಿ 5778.85 ಅಡಿ, 2017 ರಲ್ಲಿ 1570.00 ಅಡಿ, 2018 ರಲ್ಲಿ 1605.95 ಅಡಿ, 2019 ರಲ್ಲಿ 1573.64 ಅಡಿ, 2020 ರಲ್ಲಿ 1598.17 ಅಡಿ, 2021 ರಲ್ಲಿ 1608.06 ಅಡಿ, 2022 ರಲ್ಲಿ 1613.23 ಅಡಿ, 2023 ರಲ್ಲಿ 1578.79 ಅಡಿ, 2024 ರಲ್ಲಿ 1581.25 ಅಡಿಗಳು ಸಂಗ್ರಹವಾಗಿದ್ದು, ಒಟ್ಟು ಜಲಾಶಯದ ಮಟ್ಟ 1633 ಅಡಿಗಳು, ಪ್ರಸ್ತುತ ವರ್ಷದ ಜೂನ್.5 ರಂದು ಜಲಾಶಯದ ಮಟ್ಟ 1616.85 ಅಡಿ ನೀರು ಸಂಗ್ರಹವಾಗಿದೆ. ಒಟ್ಟು ಜಲಾಶಯ ನೀರಿನ ಸಂಗ್ರಹ ಸಾಮರ್ಥ್ಯ 105.788 ಟಿಎಂಸಿ ಪ್ರಸ್ತುತ ನೀರು 52.939 ಟಿಎಂಸಿ, ಒಳ ಹರಿವು 30838 ಕೂಸೆಕ್ಸ್, ಹೊರ ಹರಿವು 198 ಕೂಸೆಕ್ಸ್ ಇದೆ. ಈ ಬಾರಿಯ 124 ನೇ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಮುಂದಿನ ನಿರ್ಣಯಗಳ ಕುರಿತು ಚರ್ಚಿಸಲಾಗುವುದು ಎಂದು ಮುನಿರಾಬಾದ್ ತುಂಗಭದ್ರಾ ಯೋಜನಾ ವೃತ್ತದ ಅಧೀಕ್ಷಕ ಅಭಿಯಂತರರು ತಿಳಿಸಿದ್ದಾರೆ.

# ಭೂಸ್ವಾಧೀನ ವಿರೋಧಿ ಹೋರಾಟಗಾರರ ಬಿಡುಗಡೆಗೆ ಸಮಿತಿ ಒತ್ತಾಯ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ.**

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಸಂಯುಕ್ತ ಹೋರಾಟ ಕರ್ನಾಟಕ ಸಮಿತಿಯ ಪದಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯ ಭೂಸ್ವಾಧೀನ ನೀತಿಯ ವಿರುದ್ಧ ಪ್ರತಿಭಟಿಸುವ ವೇಳೆ ಪೊಲೀಸರು ಬಂಧಿಸಿರುವ ಹೋರಾಟಗಾರರನ್ನು ಬಿಡುಗಡೆಗೊಳಿಸುವಂತೆ ಪ್ರತಿಭಟನೆ ನಡೆಸಿ ಉಪ ತಹಶೀಲ್ದಾರ್ ಶಿವಕುಮಾರಗೌಡರವರಿಗೆ ಮನವಿ ಸಲ್ಲಿಸಿದರು.

ಸಮಿತಿಯ ಎಸ್.ಜಗನ್ನಾಥ ಮಾತನಾಡಿ, ಸರ್ಕಾರ ಸುಮಾರು 1777 ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಮುಂದಾಗಿತ್ತು. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯ 13 ಗ್ರಾಮಗಳ ರೈತರು ಇದನ್ನು ಖಂಡಿಸಿ ಹಲವು ಬಾರಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದರು. ರೈತರು ನಡೆಸಿದ ಭೂಸ್ವಾಧೀನ ವಿರುದ್ಧದ ಹೋರಾಟಕ್ಕೆ ಸರ್ಕಾರ ಕಿವಿಗೊಡದ ಕಾರಣ ದಿಂದಾಗಿ ಮತ್ತೆ ಜೂನ್.25ರಂದು ರೈತರು ನಡೆಸುತ್ತಿದ್ದ ಪ್ರತಿಭಟನೆ ಬೆಂಬಲಿಸಿ ರಾಜ್ಯದ ವಿವಿಧ ಜಿಲ್ಲೆಗಳ ಹತ್ತಾರು ಸಂಘಟನೆಗಳ ಹೋರಾಟಗಾರರು ಸೇರಿದ್ದರು. ಸರ್ಕಾರ ಭೂಸ್ವಾಧೀನ ಆದೇಶ ಹಿಂಪಡೆಯುವವರೆಗೂ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದರು. ಶಾಂತಯುತವಾಗಿ ನಡೆಯುತ್ತಿದ್ದ ಹೋರಾಟದ ವೇದಿಕೆಗೆ ಪೊಲೀಸರು ಏಕಾಏಕಿ ನುಗ್ಗಿ ಪ್ರತಿಭಟನೆಗೆ ಅವಕಾಶ ನೀಡುವುದಿಲ್ಲವೆಂದು ಪ್ರತಿಭಟನಾನಿರತ ರೈತ ಮುಖಂಡರನ್ನು ಎಳೆದಾಡಿ ಬಂಧಿಸಿದ ಕ್ರಮ ಖಂಡನೀಯ. ಸರ್ಕಾರ ರೈತವಿರೋಧಿ ಭೂಸ್ವಾಧೀನ ನೀತಿಯನ್ನು ಕೈಬಿಡಬೇಕು. ತಕ್ಷಣವೇ ಬಂಧಿತರನ್ನು ಬಿಡುಗಡೆಗೊಳಿಸಬೇಕು ಹಾಗೂ ಅನಗತ್ಯ ಬಲಪ್ರಯೋಗ ಮಾಡಿದ ಡಿಸಿಪಿ ಸಜಿತ್‌ರವರನ್ನು ಅಮಾನುತುಗೊಳಿಸಬೇಕು ಎಂದು ಒತ್ತಾಯಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಯುಕ್ತ ಹೋರಾಟ ಕರ್ನಾಟಕ ಸಮಿತಿಯ ಪದಾಧಿಕಾರಿಗಳಾದ ಬಿ.ಮಾಳಮ್ಮ, ವಿ.ನಾಗೇಂದ್ರಪ್ಪ, ಹರಟೆ ಕಾಳಪ್ಪ, ಮಾಬುಸಾಹೇಬ್, ಹನಸಿ ದೇವರಾಜ, ರವಿಕುಮಾರ್ ತಂಬ್ರಹಳ್ಳಿ, ಪಿ.ಚಾಂದ್‌ಬೀ, ಶೀಗೇನಹಳ್ಳಿ ಬಸವರಾಜ, ಹೆಚ್.ಶೇಖರಪ್ಪ, ಕರಿಯಪ್ಪ, ಕೆ.ಶಿವಣ್ಣ, ಪಿ.ಕುಮಾರ್, ಯಲ್ಲಮ್ಮ, ಎನ್.ದೊಡ್ಡಬಸಪ್ಪ ಮತ್ತಿತರರಿದ್ದರು.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

# ಮೊಹರಂ ಹಬ್ಬದ ಪ್ರಯುಕ್ತ ಶಾಂತಿ ಸಭೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ರಾಮಸಾಗರ ಹಟ್ಟಿ ಯಲ್ಲಿ ಗುಡೆಕೋಟೆ ಪೊಲೀಸ್ ಠಾಣೆ ವತಿಯಿಂದ ಗುರುವಾರ ನಡದ ಮೊಹರಂ ಹಬ್ಬದ ಅಂಗವಾಗಿ ಶಾಂತಿ ಸಭೆ ನಡೆಯಿತು ಸಭೆಯಲ್ಲಿ ಪಿಎಎಸ್‌ಐ ಸುಬ್ರಹ್ಮಣ್ಯಂ.ಜಿ ಮಾತನಾಡಿ, ಮೊಹರಂ ಹಬ್ಬ ಸೌಹಾರ್ದದ ಸಂದೇಶ ಸಾರಬೇಕೇ ಹೊರತು, ಯಾವುದೇ ಅಹಿತಕರ ಘಟನೆಗೆ ಕಾರಣವಾಗದಂತೆ ಹಬ್ಬಗಳನ್ನು ಆಚರಿಸಬೇಕು. ಹಿಂದಿನಿಂದಲೂ ಅನ್ಯೋನ್ಯತೆಯಿಂದ ಹಬ್ಬಗಳನ್ನು ಆಚರಿಸುತ್ತಾ ಬಂದಿದ್ದಾರೆ. ಅದೇ ರೀತಿಯಲ್ಲಿ ಈ ವರ್ಷವೂ ಶಾಂತಿ ರೀತಿಯಲ್ಲಿಯೇ ಹಬ್ಬದ ಸಂಭ್ರಮದಲ್ಲಿ ಪಾಲ್ಗೊಳ್ಳಬೇಕು. ಅದಕ್ಕೆ ಬೇಕಾದ ಎಲ್ಲ ಸಹಕಾರವನ್ನು ಇಲಾಖೆ ನೀಡಲಿದೆ.

ಹಬ್ಬದ ಸಂದರ್ಭದಲ್ಲಿ ಶಾಂತಿಗೆ ಭಂಗ ತರುವ ಯತ್ನ ಮಾಡಿದರೇ ಅಂಥವರ ವಿರುದ್ಧ ಇಲಾಖೆ ಕಠಿಣ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ನಾಗೇಶ್ ಗುರುಸ್ವಾಮಿ ಸೇರಿದಂತೆ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಸರ್ವ ಸದಸ್ಯರು, ಆಯಾ ಸಮುದಾಯದ ಮುಖಂಡರು, ಇದ್ದರು.

# ಆರೋಗ್ಯದೊಂದಿಗೆ ಓದಿನತ್ತ ಗಮನಹರಿಸಿ

## ಡಿಹೆಚ್‌ಓ ಡಾ.ಯಲ್ಲಾ ರಮೇಶ್‌ಬಾಬು ವಿದ್ಯಾರ್ಥಿಗಳಿಗೆ ಸಲಹೆ



**ಹಂಪಿ ಟೈಮ್ಸ್ ಬಳ್ಳಾರಿ**

ವಿದ್ಯಾರ್ಥಿಗಳು ವೈಯಕ್ತಿಕ ಆರೋಗ್ಯದೊಂದಿಗೆ ಓದಿನ ಕಡೆ ಗಮನಹರಿಸುವ ಮೂಲಕ ಉನ್ನತ ಗುರಿ ಸಾಧಿಸಲು ಪಣತೊಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ಅವರು ಹೇಳಿದರು.

ಗುರುವಾರ, ಬಳ್ಳಾರಿ ತಾಲ್ಲೂಕಿನ ಕೆ.ವೀರಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಹುಟ್ಟಿನಿಂದ 05 ವರ್ಷದೊಳಗಿನ ಮಕ್ಕಳಿಗೆ ಕಾಡುವ ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮದಡಿ ಜಿಂಕ್ ಮತ್ತು ಓಆರ್‌ಎಸ್ ದ್ರಾವಣ ಕುರಿತು ಜಾಗೃತಿ ಹತ್ತನೇಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಮನುಷ್ಯನ ಜೀವನದಲ್ಲಿ ಬಾಲ್ಯಾವ್ಯಸ್ಥೆಯಿಂದ ಹದಿಹರೆಯದಕ್ಕೆ ಕಾಲಿಡುವ ಅವಧಿಯು ಅತ್ಯಂತ ಮಹತ್ವಪೂರ್ಣವಾಗಿದೆ. ಹಾರ್ಮೋನುಗಳ ಬದಲಾವಣೆಯಿಂದ ದೈಹಿಕವಾಗಿ ಬಾಲಕ-ಬಾಲಕಿಯರಲ್ಲಿ ಬದಲಾವಣೆಗಳು ಉಂಟಾಗುತ್ತವೆ. ವಿದ್ಯಾರ್ಥಿಗಳು ಪಾಲಕರ ಹಾಗೂ ಶಾಲಾ ಗುರುಗಳ ಮಾರ್ಗದರ್ಶನ ಪಡೆದು ಭವಿಷ್ಯದಲ್ಲಿ ಉನ್ನತ ಹುದ್ದೆಗಳನ್ನು ಪಡೆಯುವ ಗುರಿಯೊಂದಿಗೆ ಸಾಗುವ ಮಹಾದಾಸೆ ಹೊಂದಬೇಕು ಎಂದು ತಿಳಿಸಿದರು.

ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ ಶ್ರದ್ಧೆಯಿಂದ ಓದುವುದಕ್ಕೆ ಹೆಚ್ಚು ಗಮನ ಹರಿಸಬೇಕು. ಇತ್ತೀಚಿನ ದಿನಗಳಲ್ಲಿ ಮೊಬೈಲ್ ಮೂಲಕ ಸಾಮಾಜಿಕ ಜಾಲ ತಾಣಗಳಾದ ಫೇಸ್ಬುಕ್, ಇಸ್ಟಾಗ್ರಾಮ್ ಮುಂತಾದವುಗಳಿಂದ ಹದಿಹರೆಯದವರು ಪರಿಚಯವಿಲ್ಲದವರೊಂದಿಗೆ ಸಲುಗೆ ಬೆಳೆದು ಕುಟುಂಬದವರಿಗೆ ಗೊತ್ತಿಲ್ಲದೆ ಮದುವೆಯಾಗುವ, ಮನೆಯಿಂದ ಕಣ್ಮರೆಯಾಗುವ ಘಟನೆಗಳ ಕುರಿತು ಪತ್ರಿಕೆಗಳಲ್ಲಿ ವರದಿಯಾಗುತ್ತಿವೆ. ಇದು ಬಾಲ್ಯವಿವಾಹಕ್ಕೂ ದಾರಿ ಮಾಡುತ್ತದೆ ಅಲ್ಲದೆ ಹಲವಾರು ಬಾರಿ ದುಷ್ಟರಿಂದ ಲೈಂಗಿಕ ದೌರ್ಜನ್ಯಕ್ಕೂ ಒಳಗಾಗುವ ಸಾಧ್ಯತೆ ಇರುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಇವುಗಳಿಂದ ದೂರ ಇರಬೇಕು.

ಆರೋಗ್ಯ ಇಲಾಖೆಯ ಎಲ್ಲ ಆಸ್ಪತ್ರೆಗಳಲ್ಲಿರುವ 'ಸ್ನೇಹ ಕ್ಲಿನಿಕ್' ನಲ್ಲಿ ಹದಿಹರೆಯದವರ ಆಪ್ತಸಮಾಲೋಚಕರ ಬಳಿ ಸಲಹೆ ಪಡೆದು ಒತ್ತಡಗಳಿಂದ ಮುಕ್ತರಾಗುವ ಹಾಗೂ ಹದಿಹರೆಯದಲ್ಲಿ ಆಕರ್ಷಕವಾಗುವ ತಂಬಾಕು ಉತ್ಪನ್ನಗಳು, ಬೀಡಿ ಸೀಗರೇಟು ಮುಂತಾದವುಗಳಿಂದ ದೂರವಿರಬೇಕು ಎಂದು ಸಲಹೆ ನೀಡಿದರು.

ಮಕ್ಕಳಲ್ಲಿ ಜಂತುಹುಳು ಕಂಡುಬಂದ ಸಂದರ್ಭದಲ್ಲಿ ಮಕ್ಕಳು ಸೇವಿಸುವ ಆಹಾರವನ್ನು ಜಂತುಹುಳುಗಳು ಕಸಿದುಕೊಳ್ಳುವ ಮೂಲಕ ದೇಹದಲ್ಲಿ ರಕ್ತದ ಪ್ರಮಾಣ ಕಡಿಮೆ ಮಾಡುವ ಜೊತೆಗೆ ರೋಗ ನಿರೋಧಕ ಶಕ್ತಿ ಕುಂದಿಸಿ ಸಣ್ಣಪುಟ್ಟ ಕಾಯಿಲೆಗಳು ದೀರ್ಘಾವಧಿಯವರೆಗೆ ಕಾಡುವಂತೆ ಮಾಡುತ್ತವೆ ಎಂದರು.

ಮುಖ್ಯವಾಗಿ ಹೆಣ್ಣುಮಗುವಿನಲ್ಲಿ ರಕ್ತಹೀನತೆ ಸತತವಾಗಿ ಮುಂದುವರೆದಲ್ಲಿ ಹದಿಹರೆಯದಲ್ಲಿಯ ಸಮಸ್ಯೆಗಳು ಮದುವೆಯ ನಂತರ ವೈವಾಹಿಕ ಜೀವನದಲ್ಲಿ ಗಂಭೀರ ಸ್ವರೂಪ ಪಡೆಯುತ್ತವೆ. ಈ ದಿಶೆಯಲ್ಲಿ ಮಕ್ಕಳು ವರ್ಷದಲ್ಲಿ ಎರಡು ಬಾರಿ ತಪ್ಪದೇ ಜಂತುಹುಳು ನಿವಾರಕ ಮಾತ್ರೆ ಸೇವಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಿಡಿಗಿನಮೊಳ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ಸಂತೋಷ ಹೆಬ್ಬಾಳ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಶಾಲೆಯ ಮುಖ್ಯಗುರುಗಳಾದ ನಾಗರಾಜ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ, ಶಕುಂತಲಮ್ಮ, ಸಮುದಾಯ ಆರೋಗ್ಯ ಅಧಿಕಾರಿ ಮಧುಲತಾ ಸೇರಿದಂತೆ ಶಾಲಾ ಶಿಕ್ಷಕರು, ಮಕ್ಕಳು ಉಪಸ್ಥಿತರಿದ್ದರು.

For Advertisements
Contact: 9448633038

ಪ್ರಗತಿ ಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ (ನಿ)
ಪ್ರಧಾನ ಕಛೇರಿ, ಜೆ.ಕೆ.ಎಸ್. ಕಾಂಪ್ಲೆಕ್ಸ್ ಮೇನ್ ಬಜಾರ್, ಹೊಸಪೇಟೆ.
ನೋಂದಣಿ ಸಂಖ್ಯೆ.ಸ.ನಿ.23/ಸೌ.ಕಾ./ಎ.ಓ.ಟಿ/4178/2016-17, ದಿನಾಂಕ 15-02-2017
ಒಂಬತ್ತನೇ ವಾರ್ಷಿಕ ಮಹಾಸಭೆಯ ನೋಟೀಸು
ಈ ಮೂಲಕ ನಮ್ಮ ಎಲ್ಲಾ ಷೇರುದಾರರಿಗೆ/ ಸದಸ್ಯರಿಗೆ ತಿಳಿಸುವು ದೇನೆಂದರೆ, ಮೇಲ್ಕಂಡ ಸಹಕಾರಿ ಸಂಘ ನಿಯಮಿತದ ಒಂಬತ್ತನೇ ವಾರ್ಷಿಕ ಮಹಾಸಭೆಯನ್ನು ಇದೇ 2025ರ ಜುಲೈ 13 ರಂದು ಅಂದರೆ 13.07.2025 ರಂದು ರವಿವಾರ ಬೆಳಗ್ಗೆ 11.00 ಗಂಟೆಗೆ, ಸ್ಟೇಷನ್ ರೋಡ್, ರೋಟರಿ ಕ್ಲಬ್ ಸಭಾಂಗಣ ಹೊಸಪೇಟೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಈ ಸಂಬಂಧದ ಸುತ್ತೋಲೆಯನ್ನು ಎಲ್ಲಾ ಸದಸ್ಯರಿಗೆ ವೈಯಕ್ತಿಕವಾಗಿ ತಲುಪಿಸಲಾಗಿದೆ.
ಒಂದು ಪಕ್ಷ ಸುತ್ತೋಲೆ ತಲುಪಿಲ್ಲದವರು ಇದನ್ನೇ ಸುತ್ತೋಲೆಯೆಂದು ಪರಿಗಣಿಸಿ ಸಭೆಗೆ ಹಾಜರಾಗಿ ಸಂಘದ ಮುನ್ನಡೆಗೆ ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕಾಗಿ ಕೋರಿಕೆ.
ಸ್ಥಳ : ಹೊಸಪೇಟೆ, ದಿನಾಂಕ : 26.06.2025
ಸಹಿ/ ಶ್ರೀ ಜಿ ಭರಮಪ್ಪ ಅಧ್ಯಕ್ಷರು
ಸಹಿ/ ಶ್ರೀ ಹೆಚ್ ಎಂ ಸಣ್ಣಸಿದ್ದಯ್ಯ ಸಿ.ಇ.ಓ.

**ಕವಿ ಮನಸು**

## ಈ ದೂರವೇಕೆ



ಅರಗಿಣೆ ನಿನ್ನನು ಕರೆದರೆ ಬಾರದೆ
ಇರುತಿಹೆ ದೂರ ಹೀಗೇಕೆ

ಹಿರಿಯರ ಒಲವಲಿ ಹರಸುತ ಕಳಿಸಿರೆ
ಪರರದು ಭಯವು ಇನ್ನೇಕೆ

ನೋಡಿದ ಮಂದಿಯು ಆಡುವ ಮಾತಿಗೆ
ನೀಡದೆ ಗಮನ ನೀನೀಗ

ಕಾಡುವ ಚಿಂತೆಯ ದೂಡುತ ದೂರಕೆ
ಬೇಡುವೆ ಬಳಿಗೆ ಬಾ ಬೇಗ

ಬಾಳಿನ ಪಯಣದೆ ಸೋಲದ ಯಾನಕೆ
ತಾಳುವ ಕಲೆಗೆ ಪ್ರಾಮುಖ್ಯ

ತೋಳಿನ ಆಸರೆ ಕೇಳುವೆ, ಬಯಕೆಯ
ದಾಳಿಯ ಕಳೆಯೆ ಈ ಸಖ್ಯ!

ಬಲ್ಲೆನು ನಿನ್ನಯ ಮಲ್ಲಿಗೆಯಾಸೆಯ
ನಲ್ಲೆಯೆ ತಂದೆ ನೀ ನೋಡು

ಸಲ್ಲದ ಕಾರಣ ಒಲ್ಲೆನು ದೂರವ
ಮೆಲ್ಲಗೆ ಬಂದು ಹೂ ಸೂಡು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಸಾಗಬೇಕಿದೆ ಶಾಲೆ

ಜ್ಞಾನದ ದೇಗುಲವಾಗಿ
ಕೈಮುಗಿದು ಕರೆವಂತಾಗಿ
ಸ್ವಾಗತಿಸುವ ಪರಿಸರವಾಗಿ
ಶಾಂತಿಯ ನೆಲೆಯಾಗಿ
ಸಾಗಬೇಕಿದೆ ಶಾಲೆ

ಪ್ರೀತಿಯಲಿ ಕರೆವರಾಗಿ
ರಮಿಸುವ ಗುರುಗಳಾಗಿ
ಸಾನಿಧ್ಯವದು ಬೆಳಕಾಗಿ
ಜನ್ಮವದು ದೀಪವಾಗಿ
ಸಾಗಬೇಕಿದೆ ಶಾಲೆ

ಹಿರಿಯರಲಿ ಗುರುಗಳಲಿ
ಭಕ್ತಿ ಗೌರವ ತುಂಬುತಲಿ
ಪ್ರಾಮಾಣಿಕ ಸತ್ಯದಲಿ
ಗುಣಗಳ ಬಿತ್ತುತಲಿ
ಸಾಗಬೇಕಿದೆ ಶಾಲೆ

ಆಟ ಪಾಠದಲಿ ಮುಂದಾಗಿ
ಗುರಿಯೆಡೆಗೆ ಸಾಗುತಲಿ
ದೇಶದ ಪ್ರಜೆಗಳಾಗಿ
ಉತ್ತಮ ಸಾರ್ಥಕತೆಗಾಗಿ
ಸಾಗಬೇಕಿದೆ ಶಾಲೆ

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ ಹಗರಿಗಜಾಪುರ

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ವಿಶ್ವಾವಸು

**27-06-2025 – ಶುಕ್ರವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುನರ್ವಸು |
| ಯೋಗ | : ವ್ಯಾಘಾತ |
| ಕರಣ | : ಕೌಳವ |
| ಸೂರ್ಯೋದಯ | : 05:44:48 |
| ಸೂರ್ಯಾಸ್ತ | : 19:15:18 |
| ರಾಹು ಕಾಲ | : 10:49-12:30 |
| ಯಮಘಂಡ ಕಾಲ | : 15:53-17:34 |
| ಗುಳಿಕ ಕಾಲ | : 07:26-09:07 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 26-06-2025**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1616.85 ಅಡಿ |
| ಒಳ ಹರಿವು | 30838 ಕ್ಯುಸೆಕ್ |
| ಹೊರ ಹರಿವು | 198 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 52.939 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಇಂದಿನ ಮಟ್ಟ | 1581.29 ಅಡಿ |
| ಒಳ ಹರಿವು | 604 ಕ್ಯುಸೆಕ್ |
| ಹೊರ ಹರಿವು | 1995 ಕ್ಯುಸೆಕ್ |
| ಸಾಮರ್ಥ್ಯ | 5.132 ಟಿಎಂಸಿ |




# ಶಾಲಾ ಸಂಸತ್ತು ಚುನಾವಣೆ ಪ್ರಜಾಪ್ರಭುತ್ವದ ಅರಿವು
# ನಾಯಕನ ಆಯ್ಕೆಗೆ ವಿದ್ಯಾರ್ಥಿಗಳಿಂದ ಮತದಾನ





■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರಜಾಪ್ರಭುತ್ವದ ಮಹತ್ವ ಮತ್ತು ಚುನಾವಣಾ ಪ್ರಕ್ರಿಯೆಯ ಕುರಿತು ಮಕ್ಕಳಿಗೆ ಪ್ರಾಯೋಗಿಕ ಜ್ಞಾನ ನೀಡುವ ಸಲುವಾಗಿ ಹೊಸಪೇಟೆ ತಾಲೂಕಿನ ನಾಗೇನಹಳ್ಳಿ ಸರ್ಕಾರಿ ಪ್ರಾಥಮಿಕ ಹಿರಿಯ ಮಾದರಿ ಶಾಲೆಯಲ್ಲಿ ಗುರುವಾರ ಶಾಲಾ ಸಂಸತ್ ಚುನಾವಣೆ ಯಶಸ್ವಿಯಾಗಿ ನಡೆಯಿತು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ದೇವರಮನೆ ರವಿಶಂಕರ ಚಾಲನೆ ನೀಡಿ ಮಾತನಾಡಿದರು. ಮಕ್ಕಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸಿಕೊಳ್ಳಲು ಮತ್ತು ಎಲ್ಲರ ಬೇಡಿಕೆಳನ್ನು ಈಡೇರಿಸುವ ಮಹತ್ತರ ಜವಾಬ್ದಾರಿಯನ್ನು ಬಾಲ್ಯಾವಸ್ಥೆಯಲ್ಲಿ ಅರಿವಿಗೆ ಬಂದರೆ ಭವಿಷ್ಯದಲ್ಲಿ ಉತ್ತಮ ನಾಯಕನನ್ನು ಆಯ್ಕೆ ಮಾಡಿಕೊಳ್ಳಲು ಸಹಕಾರಿಯಾಗಲಿದೆ. ಮಕ್ಕಳಿಗೆ ಸಮಗ್ರ ಅರಿವು ನೀಡಿ ಚುನಾವಣೆ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ತೊಡಗಿಸಿರುವ ಶಿಕ್ಷಕರ ಕಾರ್ಯ ಶ್ಲಾಘನೀಯ ಎಂದರು.

ಸಿಆರ್‌ಪಿ ಅಂಜಿನಪ್ಪ ತಂಬ್ರಹಳ್ಳಿ ಮತದಾನ ಪ್ರಕ್ರಿಯೆಗಳನ್ನು ಪರಿಶೀಲಿಸಿ, ಮತದಾನ ಮಾಡಿ ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಸಂಘಟನಾ ಕೌಶಲ್ಯಗಳು ಮತ್ತು ಉತ್ತಮ ನಿರ್ಧಾರಗಳನ್ನು ಕೈಗೊಳ್ಳುವ ಸಾಮಾರ್ಥ್ಯವನ್ನು ಹೆಚ್ಚಿಸಲಿದೆ ಎಂದರು.

**ನೈಜ ಮತದಾನದ ಅನುಭವ:** ಶಾಲಾ ಕೊಠಡಿಯಲ್ಲಿ ನಡೆದ ಈ ಚುನಾವಣೆಯಲ್ಲಿ, ವಿದ್ಯಾರ್ಥಿಗಳು ತಮ್ಮ ನಾಯಕರನ್ನು ಆಯ್ಕೆ ಮಾಡಿಕೊಳ್ಳಲು ನಿಜವಾದ ಮತದಾನದ ಅನುಭವ ಪಡೆದರು. ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಆಧಾರ್ ಕಾರ್ಡ್‌ಗಳನ್ನು ಹಿಡಿದು ಮತಗಟ್ಟೆಗೆ ಬಂದು, ಪ್ರಜಾಪ್ರಭುತ್ವದ ಬಹುಮುಖ್ಯ ಭಾಗವಾದ ಮತ ಚಲಾಯಿಸಿದರು. ಇದು ಮಕ್ಕಳಿಗೆ ಮತದಾನದ ಗೌಪ್ಯತೆ ಮತ್ತು ಮಹತ್ವವನ್ನು ಅರಿತುಕೊಳ್ಳಲು ಸಹಕಾರಿಯಾಯಿತು.

ಈ ಸಂಪೂರ್ಣ ಪ್ರಕ್ರಿಯೆಯು ನೈಜ ಚುನಾವಣಾ ವಾತಾವರಣವನ್ನು ಸೃಷ್ಟಿಸಿತ್ತು. ಶಾಲೆಯ ಶಿಕ್ಷಕರು ಚುನಾವಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿ, ಮತದಾನದ ನಿಯಮಗಳನ್ನು ವಿವರಿಸಿದರು ಮತ್ತು ಪ್ರಕ್ರಿಯೆ ಸುಗಮವಾಗಿ ನಡೆಯಲು ಸಹಕರಿಸಿದರು. ನಾಮಪತ್ರ ಸಲ್ಲಿಕೆಯಿಂದ ಹಿಡಿದು ಮತ ಚಲಾವಣೆಯವರೆಗೆ ಎಲ್ಲ ಹಂತಗಳನ್ನು ಮಕ್ಕಳಿಗೆ ಪ್ರಾಯೋಗಿಕವಾಗಿ ಪರಿಚಯಿಸಲಾಯಿತು.

**ಪ್ರಜಾಪ್ರಭುತ್ವದ ಅಡಿಪಾಯ :**ಇಂತಹ ಕಾರ್ಯಕ್ರಮಗಳು ಕೇವಲ ಸಾಂಪ್ರದಾಯಿಕ ಶಿಕ್ಷಣಕ್ಕೆ ಸೀಮಿತವಾಗದೆ, ಮಕ್ಕಳಿಗೆ ರಾಜಕೀಯ ಪ್ರಜ್ಞೆ, ನಾಯಕತ್ವ ಗುಣಗಳು, ಸಾಮೂಹಿಕ ನಿರ್ಧಾರ ಮತ್ತು ಜವಾಬ್ದಾರಿಗಳನ್ನು ಕಲಿಸುತ್ತವೆ. ಸಣ್ಣ ವಯಸ್ಸಿನಲ್ಲೇ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದರಿಂದ, ಅವರು ಭವಿಷ್ಯದಲ್ಲಿ ಉತ್ತಮ ನಾಗರಿಕರಾಗಿ ರೂಪುಗೊಳ್ಳಲು ಇದು ಸಹಕಾರಿಯಾಗುತ್ತದೆ ಎಂಬುದು ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕ್ರ ಅಭಿಪ್ರಾಯವಾಗಿತ್ತು.

ಮುಖ್ಯ ಚುನಾವಣಾಧಿಕಾರಿಯಾಗಿ ಮುಖ್ಯಗುರು ಕೊಟ್ರೇಶ, ಪಿಆರ್‌ಓ ಆಗಿ ಶಿಕ್ಷಕಿ ಸರೋಜಮ್ಮ, ಎಪಿಆರ್‌ಓ ಆಗಿ ಆಶ್ವಿನಿ ಟೀಚರ್, ಪಿಓ ಆಗಿ ಶಿಕ್ಷಕರಾದ ರತ್ನಮ್ಮ, ಶೈಲಾ ಸೇರಿದಂತೆ ಶಾಲಾ ಶಿಕ್ಷಕರು ವಿವಿಧ ಚುನಾವಣಾ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡು ಕಾರ್ಯನಿರ್ವಹಿಸಿದರು. ಸಮಾಜ ವಿಜ್ಞಾನ ಶಿಕ್ಷಕಿ ಸುಬೇನಾ ಬೇಗಂ ಚುನಾವಣಾ ಪ್ರಕ್ರಿಯೆಗಳನ್ನು ಸಕ್ರೀಯವಾಗಿ ನಿರ್ವಹಿಸಿದರು.





ಶಾಲಾ ಸಂಸತ್ತು ಚುನಾವಣೆಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಬೆಳೆಸಲು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಿಳಿಸಲು ಶಾಲಾ ಮಟ್ಟದಲ್ಲಿ ನಡೆಸುವ ಒಂದು ಪ್ರಮುಖ ಪ್ರಕ್ರಿಯೆಯಾಗಿದೆ. ಇದು ಮಕ್ಕಳಿಗೆ ಮತದಾನದ ಮಹತ್ವ, ಆಯ್ಕೆಯ ಸ್ವಾತಂತ್ರ್ಯ, ಮತ್ತು ಜವಾಬ್ದಾರಿಯುತ ಸ್ಥಾನಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ಪ್ರಾಯೋಗಿಕವಾಗಿ ಕಲಿಸುತ್ತದೆ.

ಉದ್ದೇಶಗಳು:

**ನಾಯಕತ್ವದ ಗುಣಗಳನ್ನು ಬೆಳೆಸುವುದು:** ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣಗಳು, ಸಂಘಟನಾ ಕೌಶಲ್ಯಗಳು ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು.

**ಪ್ರಜಾಪ್ರಭುತ್ವದ ಅರಿವು:** ಪ್ರಜಾಪ್ರಭುತ್ವದ ತತ್ವಗಳು, ಚುನಾವಣಾ ಪ್ರಕ್ರಿಯೆ ಮತ್ತು ಮತದಾನದ ಹಕ್ಕಿನ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸುವುದು.

**ಜವಾಬ್ದಾರಿ ಮತ್ತು ಶಿಸ್ತು:** ಚುನಾಯಿತ ಪ್ರತಿನಿಧಿಗಳು ತಮ್ಮ ಜವಾಬ್ದಾರಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಶಾಲಾ ಚಟುವಟಿಕೆಗಳಲ್ಲಿ ಶಿಸ್ತಿನಿಂದ ಭಾಗವಹಿಸಲು ಪ್ರೋತ್ಸಾಹಿಸುವುದು.

**ಸಮಸ್ಯೆ ಪರಿಹಾರ:** ಶಾಲೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಗುರುತಿಸಲು ಮತ್ತು ಅವುಗಳಿಗೆ ಪರಿಹಾರ ಕಂಡುಕೊಳ್ಳಲು ವಿದ್ಯಾರ್ಥಿಗಳನ್ನು ಉತ್ತೇಜಿಸುವುದು.

**ವಿದ್ಯಾರ್ಥಿ ಭಾಗವಹಿಸುವಿಕೆ:** ಶಾಲಾ ನಿರ್ಧಾರಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವುದು.

**ಚುನಾವಣಾ ಪ್ರಕ್ರಿಯೆ:**

ಶಾಲಾ ಸಂಸತ್ತು ಚುನಾವಣೆಗಳು ಸಾಮಾನ್ಯವಾಗಿ ಈ ಕೆಳಗಿನ ಹಂತಗಳನ್ನು ಒಳಗೊಂಡಿರುತ್ತವೆ:

ಚುನಾವಣಾ ಆಯೋಗದ ರಚನೆ: ಶಾಲಾ ಶಿಕ್ಷಕರು ಮತ್ತು ಕೆಲವು ಹಿರಿಯ ವಿದ್ಯಾರ್ಥಿಗಳನ್ನು ಒಳಗೊಂಡ ತಾತ್ಕಾಲಿಕ ಚುನಾವಣಾ ಆಯೋಗವನ್ನು ರಚಿಸಲಾಗುತ್ತದೆ. ಇದು ಚುನಾವಣೆಗಳನ್ನು ನಿಷ್ಪಕ್ಷಪಾತವಾಗಿ ನಡೆಸುವ ಜವಾಬ್ದಾರಿ ಹೊಂದಿರುತ್ತದೆ.

**ಸ್ಥಾನಗಳ ಗುರುತಿಸುವಿಕೆ:** ಶಾಲಾ ಮುಖ್ಯಸ್ಥ, ಉಪಮುಖ್ಯಸ್ಥ, ಕ್ರೀಡಾ ಕಾರ್ಯದರ್ಶಿ, ಸಾಂಸ್ಕೃತಿಕ ಕಾರ್ಯದರ್ಶಿ, ಆರೋಗ್ಯ ಮತ್ತು ನೈರ್ಮಲ್ಯ ಕಾರ್ಯದರ್ಶಿ ಮುಂತಾದ ವಿವಿಧ ಸ್ಥಾನಗಳನ್ನು ಗುರುತಿಸಲಾಗುತ್ತದೆ.

**ಅಧಿಸೂಚನೆ ಮತ್ತು ನಾಮಪತ್ರ ಸಲ್ಲಿಕೆ:** ಚುನಾವಣೆ ದಿನಾಂಕ, ಸ್ಥಾನಗಳು ಮತ್ತು ನಾಮಪತ್ರ ಸಲ್ಲಿಸುವ ದಿನಾಂಕಗಳನ್ನು ಪ್ರಕಟಿಸಲಾಗುತ್ತದೆ. ಆಸಕ್ತ ವಿದ್ಯಾರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ನಾಮಪತ್ರಗಳನ್ನು ಸಲ್ಲಿಸುತ್ತಾರೆ.

**ಪರಿಶೀಲನೆ ಮತ್ತು ಉಮೇದುವಾರಿಕೆ:** ಸಲ್ಲಿಸಿದ ನಾಮಪತ್ರಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.

**ಪ್ರಚಾರ:** ಅಭ್ಯರ್ಥಿಗಳು ತಮ್ಮ ಸಹಪಾಠಿಗಳಿಗೆ ತಮ್ಮ ಉದ್ದೇಶಗಳು ಮತ್ತು ಶಾಲಾ ಅಭಿವೃದ್ಧಿಯ ಯೋಜನೆಗಳನ್ನು ವಿವರಿಸುವ ಮೂಲಕ ಪ್ರಚಾರ ಮಾಡುತ್ತಾರೆ. ಇದು ಭಾಷಣಗಳು, ಭಿತ್ತಿಪತ್ರಗಳು ಅಥವಾ ಸಣ್ಣ ಸಭೆಗಳ ಮೂಲಕ ನಡೆಯಬಹುದು.

**ಮತದಾನ:** ನಿಗದಿಪಡಿಸಿದ ದಿನಾಂಕದಂದು, ವಿದ್ಯಾರ್ಥಿಗಳು ಪ್ರಜಾಪ್ರಭುತ್ವ ರೀತಿಯಲ್ಲಿ ಮತದಾನ ಮಾಡುತ್ತಾರೆ. ಮತಪೆಟ್ಟಿಗೆಗಳನ್ನು ಬಳಸಲಾಗುತ್ತದೆ ಮತ್ತು ಮತಗಳನ್ನು ರಹಸ್ಯವಾಗಿ ಎಣಿಕೆ ಮಾಡಲಾಗುತ್ತದೆ.

**ಫಲಿತಾಂಶ ಘೋಷಣೆ:** ಅತಿ ಹೆಚ್ಚು ಮತಗಳನ್ನು ಪಡೆದ ಅಭ್ಯರ್ಥಿಗಳನ್ನು ವಿಜೇತರೆಂದು ಘೋಷಿಸಲಾಗುತ್ತದೆ.

**ಸಂಸತ್ತಿನ ರಚನೆ ಮತ್ತು ಪ್ರಮಾಣ ವಚನ:** ಚುನಾಯಿತ ಪ್ರತಿನಿಧಿಗಳು ತಮ್ಮ ಸ್ಥಾನಗಳ ಪ್ರಮಾಣ ವಚನ ಸ್ವೀಕರಿಸುತ್ತಾರೆ ಮತ್ತು ಶಾಲಾ ಸಂಸತ್ತು ಔಪಚಾರಿಕವಾಗಿ ಅಸ್ತಿತ್ವಕ್ಕೆ ಬರುತ್ತದೆ.

**ಶಾಲಾ ಸಂಸತ್ತಿನ ಪಾತ್ರ ಮತ್ತು ಜವಾಬ್ದಾರಿಗಳು**

ಶಾಲಾ ಶಿಸ್ತು ಮತ್ತು ನೈರ್ಮಲ್ಯವನ್ನು ಕಾಪಾಡುವುದು.

ಶಾಲಾ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲು ಸಹಾಯ ಮಾಡುವುದು.

ವಿದ್ಯಾರ್ಥಿಗಳ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ಶಾಲಾ ಆಡಳಿತದ ಗಮನಕ್ಕೆ ತರುವುದು.

ಶಾಲಾ ಗ್ರಂಥಾಲಯ, ಕ್ರೀಡಾ ಚಟುವಟಿಕೆಗಳು ಮತ್ತು ಇತರ ಸೌಲಭ್ಯಗಳ ನಿರ್ವಹಣೆಯಲ್ಲಿ ಸಹಕರಿಸುವುದು.

ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಲು ನೆರವಾಗುವುದು. ಶಾಲಾ ಸಂಸತ್ತು ಚುನಾವಣೆಗಳು ಕೇವಲ ಒಂದು ಪ್ರಕ್ರಿಯೆಯಲ್ಲ, ಬದಲಿಗೆ ಭವಿಷ್ಯದ ನಾಗರಿಕರಿಗೆ ಪ್ರಜಾಪ್ರಭುತ್ವದ ಪಾಠಗಳನ್ನು ಕಲಿಸುವ ಒಂದು ವೇದಿಕೆಯಾಗಿದೆ.

**ಮೈಕ್ರೋ ನ್ಯೂಸ್**

## ಮೊಹರಂ ಹಬ್ಬ ನಿಷೇಧಾಜ್ಞೆ ಜಾರಿ.

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಕೂಡ್ಲಿಗಿ ಪೊಲೀಸ್ ಠಾಣಾ ವ್ಯಾಪ್ತಿಯ ಹನಸಿ ಗ್ರಾಮದಲ್ಲಿ 2025 ನೇ ಸಾಲಿನ ಮೊಹರಂ ಹಬ್ಬದ ಆಚರಣೆಗೆ ಸಂಬಂಧಿಸಿದಂತೆ ಶಾಂತಿ ಮತ್ತು ಸೌಹಾರ್ದತೆ ಕಾಪಾಡುವ ಹಿತದೃಷ್ಟಿಯಿಂದ ಮತ್ತು ಈ ಹಿಂದಿನ ಅಹಿತಕರ ಘಟನೆಗಳನ್ನು ಹಾಗೂ ಪ್ರಸ್ತುತ ಸನ್ನಿವೇಶಗಳನ್ನು ಆಧರಿಸಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಹನಸಿ ಗ್ರಾಮದಲ್ಲಿ ಜೂ.26 ರಿಂದ ಜು.6 ರವರೆಗೆ ಸಾರ್ವಜನಿಕವಾಗಿ ಜನರು ಗುಂಪು ಸೇರದಂತೆ, ಮೆರವಣಿಗೆಗಳನ್ನು ನಡೆಸದಂತೆ, ಪಂಜಾಗಳನ್ನು ಕೂಡಿಸದಂತೆ ಮೊಹರಂ ಹಬ್ಬವನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ್ ಆದೇಶ ಹೊರಡಿಸಿದ್ದಾರೆ.

EVENT
Media
Coverage
Call us
94486 33038

COLD PRESSED OILS
HEALTH
Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089

## ಕಳಪೆಕಾಮಗಾರಿಗೆತರಾಟೆ

ಮೊದಲ ಪುಟದಿಂದ

ಪ್ರತಿಷ್ಠತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪಡೆಯಲು ಕಾರಣರಾದ ಮತ್ತು ಸ್ವಯಂಪ್ರೇರಿತವಾಗಿ ತರಬೇತಿ ನೀಡಿದ ನಾಗೇನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಾಲ್ವರು ಶಿಕ್ಷಕರನ್ನು ಸನ್ಮಾನಿಸಲಾಯಿತು. ಪಿಡಿಓ ವಾಸುಕಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾಪಂ ಉಪಾಧ್ಯಕ್ಷರು, ಸದಸ್ಯರು, ಕಂದಾಯ ಅಧಿಕಾರಿ ರವಿಚಂದ್ರ ಇತರರು ಉಪಸ್ಥಿತರಿದ್ದರು. ಶಿಕ್ಷಕಿ ಅನಿತಾ ನಿರ್ವಹಿಸಿದರು.

# ಅಟಲ್‌ಜೀ ಮೃಗಾಲಯಕ್ಕೆ ನವ ಅತಿಥಿ 'ರೇವಾ' ಗಂಡು ಹುಲಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಕಲ್ಯಾಣ ಕರ್ನಾಟಕ ವಿಭಾಗದ ಏಕೈಕ ಸಫಾರಿ ಹೊಂದಿರುವ ಕಮಲಾಪುರದ ಶ್ರೀಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ಗೆ ಮಂಗಳೂರು ಪಿಲಿಕುಳ ಜೈವಿಕ ಉದ್ಯಾನವನದಿಂದ 'ರೇವಾ' ಎಂಬ ಗಂಡು ಹುಲಿ ನವ ಅತಿಥಿಯಾಗಿ ಗುರುವಾರ ಆಗಮಿಸಿದೆ ಎಂದು ಕಾರ್ಯ ನಿರ್ವಾಹಕ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾ ಅಧಿಕಾರಿ ಡಾ.ರಾಜೇಶ್ ನಾಯ್ಕ ತಿಳಿಸಿದ್ದಾರೆ.

ಮೃಗಾಲಯಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ದಿನೇ ದಿನೇ



ಹೆಚ್ಚಾಗುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳನ್ನು ಪ್ರವಾಸಿಗರಿಗೆ ವೀಕ್ಷಿಸಲು ಅನುವು ಮಾಡಿಕೊಡಲು ಪ್ರಾಣಿ ವಿನಿಮಯ ಕಾರ್ಯಕ್ರಮದಡಿ ಮಂಗಳೂರು ಪಿಲಿಕುಳ ಜೈವಿಕ ಉದ್ಯಾನವನದಿಂದ ಒಂದು ಗಂಡು ಹುಲಿ ಮತ್ತು ಒಂದು ಗಂಡು ನೀರು ಕುದುರೆಯನ್ನು ಹಸ್ತಾಂತರಿಸಿಕೊಳ್ಳಲು ಕೇಂದ್ರ ಮೃಗಾಲಯ ಪ್ರಾಧಿಕಾರ ನವದೆಹಲಿ ಅನುಮತಿ ನೀಡಿದೆ. ಗುರುವಾರದಂದು ರೇವಾ ಎಂಬ ಹೆಸರಿನ ಗಂಡು ಹುಲಿ ಅತಿಥಿಯಾಗಿ ಆಗಮಿಸಿದೆ. ಮುಂದಿನ ದಿನಗಳಲ್ಲಿ ನೀರು ಕುದರೆ ಆಗಮಿಸಲಿದೆ ಎಂದು ಮಾಹಿತಿ ನೀಡಿದ್ದಾರೆ.

- Admissions
- Requirements
- Firm Branding
- Public Notice
- Change of Name

"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES Kannada Daily
Print & Digital News Paper
BOOK NOW!
Scan to Read

- Obituary
- Remembrance
- Birthday wish ads
- Events Display &
- Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038